ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 46 ರಿಂದ 49 | ಡಿಸೆಂಬರ್ 4, 1983 | ಬೆಲೆ 60 ಪೈಸೆ

ಪಾಲಿಟ್ ಬ್ಯೂರೋ ಸಭೆ

ಭಾರತದಲ್ಲಿ ಶಾಂತಿ ಚಳುವಳಿಯನ್ನು ವ್ಯಾಪಕಗೊಳಿಸಬೇಕಾಗಿದೆ

ಸಿ. ಪಿ. ಐ. (ಎಂ.) ನ ಪೊಲಿಟ್ ಬ್ಯೂರೋ ನವೆಂಬರ್ 2 ಹಾಗೂ 3 ರಂದು ದೆಹಲಿಯಲ್ಲಿ ಸಭೆ ಸೇರಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯ ನಂತರದ ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಸಭೆ ವಿಮರ್ಶೆ ನಡೆಸಿತು.

ಅಂತರಾಷ್ಟ್ರೀಯವಾಗಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿರುವುದನ್ನು ಸಭೆ ಗಮನಿಸಿತು, ಅಮೆರಿಕಾ ಹಾಗೂ ಅದರ ನಾಟೋ ಮಿತ್ರರು ಪರ್ಷಿಂಗ್ ಹಾಗೂ ಕ್ರೂಯಿಸ್ ಕ್ಷಿಪಣಿಗಳನ್ನು ಯುರೋಪಿನಲ್ಲಿ ನೆಲೆಗೊಳಿಸಲು ನಿರ್ಧರಿಸಿದ್ದಾರೆ, ಜೊತೆಗೆ ಲೆಬನಾನ್‌ನಲ್ಲಿ ಅಮೆರಿಕಾ ಹಾಗೂ ಫ್ರೆಂಚ್ ಪಡೆಗಳ ನೇರ ಹಸ್ತಕ್ಷೇಪ ಸಾಮ್ರಾಜ್ಯಶಾಹಿಗಳು ತಮ್ಮ ಮಿತ್ರರನ್ನು ಬಲೆಯಲ್ಲಿ ಭದ್ರವಾಗಿ ಸಿಲುಕಿಸಿಕೊಂಡಿದ್ದಾರೆ ಎಂಬುದನ್ನು ತೋರಿಸಿದೆ,

ಗ್ರೆನೆಡಾದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ನಡೆಸಿದ ನಗ್ನ ಆಕ್ರಮಣ ಇತ್ತೀಚಿನ ಪ್ರಮುಖ ಬೆಳವಣಿಗೆ ಎಂದು ಪಾಲಿಟ್ ಬ್ಯೂರೋ ಹೇಳಿದೆ. ಈ ದುರಾಕ್ರಮಣವನ್ನು ಜಗತ್ತಿನಾದ್ಯಂತ ಖಂಡಿಸಲಾಗಿದೆ. ಭದ್ರತಾ ಸಮಿತಿಯಲ್ಲಿ ಒಬ್ಬರೇ ಒಬ್ಬ ಸದಸ್ಯರೂ ಅಮೆರಿಕಾದ ಪರವಾಗಿ ಮತ ನೀಡಲಿಲ್ಲ, ಆದರೂ ಅಮೆರಿಕನ್ ಆಡಳಿತಗಾರರು ತಮ್ಮ ಕೃತ್ಯವನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತಿದ್ದಾರೆ, ಆಕ್ರಮಣಕಾರ ತನ್ನ ಮಿತ್ರರ ಬಗ್ಗೆ ಹೊಂದಿರುವ ತಿರಸ್ಕಾರ ಭಾವನೆಯನ್ನು ಇದು ತೋರಿಸುತ್ತದೆ ಎಂದು ಪಾಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಸಾಮ್ರಾಜ್ಯಶಾಹಿಗಳ ಈ ನಗ್ನ ಪ್ರಯತ್ನಗಳಿಗೆ ವಿರುದ್ಧವಾಗಿ ಯುರೋಪಿನ ಎಲ್ಲೆಡೆ, ಜಪಾನ್, ಕೆನಡಾ ಹಾಗೂ ಸ್ವತಃ ಅಮೆರಿಕಾದಲ್ಲೇ ಅಭೂತಪೂರ್ವ ಶಾಂತಿ ಚಳುವಳಿ ನಡೆಯುತ್ತಿದೆ. ಮಾನವ ಕುಲದ ಜೀವನ್ಮರಣ ಪ್ರಶ್ನೆಯೊಂದರಬಗ್ಗೆ ಇಷ್ಟೊಂದು ಜನ ಒಂದೆಡೆ ಸೇರುವುದನ್ನು ಜಗತ್ತು ಹಿಂದೆಂದೂ ಕಂಡಿಲ್ಲ. ಭಾರತವೂ ಈ ಜಾಗತಿಕ ಚಳುವಳಿಯಲ್ಲಿ ಪಾತ್ರ ವಹಿಸಿದೆಯಾದರೂ ಅದರ ಸಾಮ್ರಾಜ್ಯಶಾಹೀ-ವಿರೋಧೀ ಪರಂಪರೆಯನ್ನು ಗಮನಿಸಿದರೆ ಇದು ಸಾಕಷ್ಟು ಪ್ರಮಾಣದಲ್ಲಿ ಇಲ್ಲ ಎನ್ನಬೇಕಾಗುತ್ತದೆ ಆದ್ದರಿಂದ ಶಾಂತಿ ಚಳುವಳಿಯನ್ನು ವ್ಯಾಪಕಗೊಳಿಸಲು ಪಕ್ಷ ತನ್ನ ಕೈಲಾದ್ದನ್ನೆಲ್ಲಾ ಮಾಡಬೇಕು ಎಂದು ಪಾಲಿಟ್ ಬ್ಯೂರೋ ನಿರ್ಧರಿಸಿದೆ.

ಗ್ರೆನೆಡಾದಲ್ಲಿ ಅಮೆರಿಕಾದ ಆಕ್ರಮಣದ ವಿರುದ್ಧ ತಳೆದ ನಿಲುವನ್ನು ದೃಢವಾಗಿ ಹಾಗೂ ತೀವ್ರವಾಗಿ ಮುಂದುವರೆಸಬೇಕೆಂದು ಪಾಲಿಟ್ ಬ್ಯೂರೋ ಭಾರತ ಸರಕಾರಕ್ಕೆ ಕರೆ ನೀಡಿದೆ. ಆಕ್ರಮಣಕಾರರ ವಿರುದ್ಧ ಅಂತರಾಷ್ಟ್ರೀಯ ಸಮುದಾಯವನ್ನು ಒಗ್ಗೂಡಿಸಲು ದೆಹಲಿಯಲ್ಲಿ ನಡೆಯುವ ಕಾಮನ್‌ವೆಲ್ತ್ ಸಮ್ಮೇಳನವನ್ನು ಬಳಸಿಕೊಳ್ಳಬೇಕು ಮತ್ತು ಗ್ರೆನೆಡಾವನ್ನು "ಪ್ರತಿನಿಧಿಸುತ್ತೇವೆ" ಎನ್ನುವ ಅಮೆರಿಕನ್ ಕೈಗೊಂಬೆಗಳನ್ನು ಸಮ್ಮೇಳನದಿಂದ ಹೊರಗಿಡಬೇಕೆಂದು ಪಾಲಿಟ್ ಬ್ಯೂರೋ ಒತ್ತಾಯಿಸಿದೆ.

ಸಾಮೂಹಿಕ ಚಳುವಳಿ ಬೆಳೆಯಬೇಕು

ರಾಷ್ಟ್ರದ ಪರಿಸ್ಥಿತಿಯ ವಿಮರ್ಶೆ ಮಾಡುತ್ತಾ ಆರ್ಥಿಕ ಸ್ಥಿತಿ ಇನ್ನಷ್ಟು ಕೆಟ್ಟಿದೆಯೆಂದು ಪಾಲಿಟ್ ಬ್ಯೂರೋ ಗಮನಿಸಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಕುಸಿದು ಬಳಕೆದಾರರ ಸ್ಥಿತಿ 'ಶೋಚನೀಯವಾಗಿದೆ. ಅದೇ ಹೊತ್ತಿಗೆ ರೈತರಿಗೆ ನ್ಯಾಯ ಬೆಲೆ ಸಿಗುತ್ತಿಲ್ಲ. 'ಕೂಲಿಗಾಗಿ ಕಾಳು' ಯೋಜನೆ ಕೈಬಿಟ್ಟಿದ್ದು, ವ್ಯಾಪಕ ಪ್ರಮಾಣದ ಲಾಕೌಟುಗಳ ಹಾಗೂ ಕಾರ್ಖಾನೆಗಳು ಮುಚ್ಚಲ್ಪಟ್ಟಿರುವುದರಿಂದ ನಿರುದ್ಯೋಗ ಸಮಸ್ಯೆ ಮತ್ತಷ್ಟು ಗಂಭೀರಗೊಳ್ಳುತ್ತಿದೆ. ಕೇಂದ್ರ ಸರಕಾರ ಮುಂಬೈಯ 13 ಹತ್ತಿಗಿರಣಿಗಳನ್ನು ವಹಿಸಿಕೊಳ್ಳಬೇಕಾಗಿ ಬಂದಿದೆ. ಸರಕಾರದ ಈ ಕ್ರಮ ಸ್ವಾಗತಾರ್ಹವಾದರೂ ಖಾಸಗೀ ವಲಯ ಈ ಕೈಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ವಿಫಲವಾಗಿರುವುದರಿಂದ ಸಮಸ್ತ ಹತ್ತಿ ಕೈಗಾರಿಕೆಯ ರಾಷ್ಟ್ರೀಕರಣವಿಲ್ಲದೆ ಬೇರೆ ಯಾವುದರಿಂದಲೂ ಸರಕಾರದ ಉದ್ದೇಶ ಫಲಿಸಲಾರದು. ಪಶ್ಚಿಮ ಬಂಗಾಳದ ಸೆಣಬು ಕೈಗಾರಿಕೆಯದ್ದು ಇದೇ ಸ್ಥಿತಿಯೆಂದು ಪಾಲಿಟ್‌ಬ್ಯೂರೊ ಹೇಳಿದೆ.

ದೇಶಾದ್ಯಂತ ಸಂಯುಕ್ತಹೋರಾಟಗಳು ಬೆಳೆದುಬರುತ್ತಿರುವ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುವ ಪಾಲಿಟ್ ಬ್ಯೂರೋ ಇವೆಲ್ಲವನ್ನು ಸಂಯೋಜಿಸಿ ಸರಕಾರದ ಧೋರಣೆಗಳನ್ನು ಬದಲಿಸುವಂತೆ ಮಾಡುವ ದಿಕ್ಕಿನಲ್ಲಿ ಹೋರಾಟವನ್ನು ಕೊಂಡೊಯ್ಯಬೇಕೆಂದು ಅದು ಅಭಿಪ್ರಾಯ ಪಟ್ಟಿದೆ. ಆಳುವ ಪಕ್ಷದ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳನ್ನು ಮಂಡಿಸಬೇಕೆಂದು ಬಯಸುವ ಎಲ್ಲಾ ಪಕ್ಷಗಳು ಹಾಗೂ ಸಂಘಟನೆಗಳು ಜನರ ದೈನಂದಿನ ಜೀವನದ ಸಮಸ್ಯೆಗಳ ಬಗ್ಗೆ ಸಾಮೂಹಿಕ ಹೋರಾಟಗಳು ಬೆಳೆದು ಬರುವಂತೆ ಮಾಡಬೇಕೆಂದು ಅದು ಕರೆ ನೀಡಿದೆ.

ನೆನಪಿನಂಗಳದಲ್ಲಿ ಕಾ. ಪ್ರಮೋದ್ ಬಾಬು

ಸಿ. ಪಿ. ಐ. (ಎಂ)ನ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಪೊಲಿಟ ಬ್ಯೂರೋದ ಹಿರಿಯ ಸದಸ್ಯರಾಗಿದ್ದ, ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮತ್ತು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಅಧ್ಯಕ್ಷರಾಗಿದ್ದ ಎಲ್ಲಕ್ಕಿಂತ ಹೆಚ್ಚಾಗಿ ಓರ್ವ ಶ್ರೇಷ್ಠ ಕ್ರಾಂತಿಕಾರಿಯಾಗಿದ್ದ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತಾರವರು ನಮ್ಮಿಂದ ಅಗಲಿ ನವೆಂಬರ್ 29ಕ್ಕೆ ಒಂದು ವರ್ಷ ಗತಿಸಿದೆ.

ಕಳೆದವರ್ಷ ಚೀನಾ ಸರ್ಕಾರದ ಆಹ್ವಾನದ ಮೇರೆಗೆ ಬೀಜಿಂಗ್‌ಗೆ ತೆರಳಿದ್ದ ಕಾ. ಗುಪ್ತಾ ಅವರು ತಮ್ಮನ್ನು ತೀವ್ರವಾಗಿ ಬಾಧಿಸುತ್ತಿದ್ದ ಶ್ವಾಸಕೋಶದ ತೊಂದರೆಗೆ ಅಲ್ಲೇ ಚಿಕಿತ್ಸೆಯನ್ನೂ ಸಹ ಪಡೆಯುತ್ತಿದ್ದರು. ಆದರೆ ಚೀನೀ ವೈದ್ಯರ ಸತತ ಪರಿಶ್ರಮವನ್ನೂ ಮೀರಿ ಧಾವಿಸಿದ ಸಾವು ಕಾ. ಗುಪ್ತಾರವರನ್ನು ಕಳೆದ ವರ್ಷ ನವೆಂಬರ್ 29 ರಂದು ಅಪಹರಿಸಿದಾಗ ಇಡೀ ದೇಶದ ಕಮ್ಯುನಿಸ್ಟ್ ಚಳವಳಿ ಶೋಕದಿಂದ ಕಂಬನಿಗರೆದದ್ದು ನಮ್ಮೆಲ್ಲರ ಸ್ಮೃತಿ ಪಟಲದಲ್ಲಿ ಅಚ್ಚ ಹಸುರಾಗಿ ಉಳಿದಿರುವ ನೆನಪು.

ಕಲ್ಕತ್ತಾ ಮುನಿಸಿಪಲ್ ಕಾರ್ಪೋರೇಶನ್‌ನಲ್ಲಿ ಒಬ್ಬ ನೌಕರನಾಗಿ ಸೈಕಲ್‌ನಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಆರಂಭಿಸಿದ ಕಾ. ಗುಪ್ತಾ ಅವರು ನಂತರ ಪಶ್ಚಿಮ ಬಂಗಾಲದ ಆಡಳಿತವನ್ನು ನಿಯಂತ್ರಿಸುವ ಪಕ್ಷದ ಹಾಗೂ ಎಡರಂಗದ ಮುಂದಾಳಾಗಿ ಬೆಳೆದು ಬಂದ ರೀತಿ ಅದ್ಭುತವಾದುದು.

ಅತ್ಯಂತ ಸರಳ ಜೀವನ ರಾಜಿಯಿಲ್ಲದ ಆದರ್ಶ ವ್ಯಕ್ತಿತ್ವ ಸಂಗಾತಿಗಳೊಂದಿಗೆ ನಿಕಟ ಸಂಬಂಧ, ಅಚಲವಾಗಿದ್ದ ಸೈದ್ಧಾಂತಿಕ ನಿಷ್ಠೆ ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿದ್ದ ಆತ್ಮೀಯತೆಯೊಡಗೂಡಿದ ಕಟ್ಟು ಶಿಸ್ತು, ಇವು ಗುಪ್ತಾರವರ ಶ್ರೇಷ್ಠ ಬದುಕಿನ ಗುಟ್ಟುಗಳಾಗಿದ್ದವು,

ಕಾ. ಗುಪ್ತಾರವರ ಬದುಕಿನಿಂದ ಕಲಿತು ಅವರ ಆದರ್ಶದ ಅಡಿಯಲ್ಲಿ ನಿಂತು, ಅವರು ಆಪ್ತವಾಗಿ ಪ್ರೀತಿಸುತ್ತಿದ್ದ ಹೊಸ ಸಮಾಜದ ನಿರ್ಮಾಣದಲ್ಲಿ ಸಹ ಭಾಗಿಗಳಾಗುವುದೇ ನಾವು ಅವರಿಗೆ ಸಲ್ಲಿಸಬಹುದಾದ ಬಹು ದೊಡ್ಡ ಶ್ರದ್ಧಾಂಜಲಿ.

ರಿಟ್ರೆಂಚ್‌ಮೆಂಟ್, ಕ್ಲೋಶರ್, ಲೇ-ಆಫ್ ವಿರುದ್ಧ ಡಿಸೆಂಬರ್ 4 ರಂದು ಅಖಿಲ ಭಾರತ ದಿನಾಚರಣೆ

ಡಿಸೆಂಬರ್ 4 ರಂದು ರಿಟ್ರೆಂಚ್‌ಮೆಂಟ್ ವಿರೋಧ, ಕ್ಲೋಶರ್ ವಿರೋಧ, ಬೀಗ ಮುದ್ರೆ ವಿರೋಧ, ಲೇ-ಆಫ್ ಮತ್ತು ಡಿ-ನೋಟಿಫಿಕೇಶನ್ ವಿರೋಧ ಅಖಿಲ ಭಾರತ ದಿನವನ್ನು ಆಚರಿಸುವಂತೆ ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳುವಳಿ ಸಮಿತಿ ಕರೆನೀಡಿದೆ

ರಾಷ್ಟ್ರೀಯ ಚಳುವಳಿ ಸಮಿತಿಗೆ ಸೇರಿರುವ ಕಾರ್ಮಿಕ ಸಂಘಗಳು ಸಂಟೀ ಸಭೆಗಳ ಮೂಲಕ, ಪ್ರದರ್ಶನ, ಮೆರವಣಿಗೆಗಳ ಮೂಲಕ, ಬ್ಯಾಡ್ಜ್‌ಗಳನ್ನು ಧರಿಸುವ ಮೂಲಕ ಡಿಸೆಂಬರ್ 4 ರಂದು ಅಖಿಲ ಭಾರತ ದಿನವನ್ನು ಆಚರಿಸಬೇಕೆಂದು ರಾಷ್ಟ್ರೀಯ ಚಳುವಳಿ ಸಮಿತಿ ಕರೆ ನೀಡಿದೆ.

ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ 1984ರ ಜನವರಿ 20 ರಂದು ನವದೆಹಲಿಯಲ್ಲಿ ನಡೆಯುವ ಅಖಿಲ ಭಾರತ ಸಮಾವೇಶವನ್ನು ಜನಪ್ರಿಯಗೊಳಿಸಬೇಕೆಂದು ಸಹ ರಾಷ್ಟ್ರೀಯ ಪ್ರಚಾರ ಸಮಿತಿ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಡಿ. ವೈ. ಎಫ್. ಐ. 2ನೇ ರಾಜ್ಯ ಸಮ್ಮೇಳನ, ಸ್ವಾಗತ ಸಮಿತಿಯ ಮನವಿ

1984ರ ಫೆಬ್ರವರಿ 16 ರಿಂದ 19ರ ವರೆಗೆ ಕೇರಳದ ಕಲ್ಲಿಕೋಟೆಯಲ್ಲಿ ನಡೆಯಲಿರುವ ಡಿ.ವೈ.ಎಫ್.ಐ. ಎರಡನೇ ರಾಷ್ಟ್ರ ಸಮ್ಮೇಳನದ ಅಂಗವಾಗಿ ರಾಜ್ಯದ 2ನೇ ಸಮ್ಮೇಳನವನ್ನು ಹೊಸಪೇಟೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆಯಷ್ಟೆ.

ಈಗಾಗಲೇ ಸ್ವಾಗತ ಸಮಿತಿಯ ಪರವಾಗಿ ಎಲ್ಲಾ ಸಾಮೂಹಿಕ ಸಂಘಟನೆಗಳಿಗೂ ಹಾಗೂ ಹಲವು ಸಂಗಾತಿ ಸ್ನೇಹಿತರುಗಳಲ್ಲಿ ಸಹಾಯಕ್ಕಾಗಿ ಮನವಿ ಮಾಡಿಕೊಳ್ಳಲಾಗಿದೆ. ಮನವಿ ಪತ್ರ ತಲುಪದಿರುವವರು ಇದೇ ಮನವಿಪತ್ರವೆಂದು ತಿಳಿಯಬೇಕೆಂದು ವಿನಂತಿ.

ಸಮ್ಮೇಳನದಲ್ಲಿ ಸ್ಫೂರ್ತಿಪಡೆದು ಮುಂದೆ ತಮ್ಮ ಜಿಲ್ಲೆಗಳಲ್ಲಿ ಡಿ. ವೈ. ಎಫ್.ಐ. ಸಂಘಟನೆಯನ್ನು ಬಲಪಡಿಸಲು ಇಚ್ಛಿಸುವ ಯುವ ಜನರನ್ನು ಪ್ರೋತ್ಸಾಹಿಸಿ ಸಮ್ಮೇಳನಕ್ಕೆ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ.

ಸಮ್ಮೇಳನದ ಯಶಸ್ವಿಗಾಗಿ ತಮ್ಮ ಆರ್ಥಿಕ ಸಹಾಯವನ್ನು ಅಪೇಕ್ಷಿಸುತ್ತೇವೆ. ಸಹಾಯ ವಂತಿಕೆಯನ್ನು ನೀಡುವವರು ಸ್ವಾಗತ ಸಮಿತಿಯ ಖಜಾಂಚಿ, ಎಸ್. ರಾಮಚಂದ್ರ ನಾವಡ, 23/3, ಮಂಜುಳ ಸೌಂಡ್ ಸಿಸ್ಟಂ ವೆಟರ್‌ನರಿ ಆಸ್ಪತ್ರೆ ಹತ್ತಿರ, ಹೊಸಪೇಟೆ-583 201, ಇವರಿಗೆ ದಯವಿಟ್ಟು ಕಳುಹಿಸಬೇಕೆಂದು ವಿನಂತಿ,

ವಂದನೆಗಳು.

ಎಸ್. ಸೂರ್ಯನಾರಾಯಣರಾವ್,
ಎಂ.ಎಲ್.ಎ.
ಅಧ್ಯಕ್ಷ

ಜಂಬಯ್ಯನಾಯಕ, ಕಾರ್ಯದರ್ಶಿ

ಓದುಗರ ಗಮನಕ್ಕೆ

ನವೆಂಬರ್ 13, 20 ಮತ್ತು 27ರ ಸಂಚಿಕೆಗಳು ಪ್ರಕಟವಾಗಿಲ್ಲ. ಈ ಸಂಚಿಕೆಯಲ್ಲಿ 3, 4, 5 ಮತ್ತು 6ನೇ ಪುಟಗಳಲ್ಲಿ ಪತ್ರಿಕೆಯ ದಿನಾಂಕ ನವೆಂಬರ್ 27, 1983 ಎಂದಿರುವುದನ್ನು ಡಿಸೆಂಬರ್ 4, 1983 ಎಂದು ಓದಿಕೊಳ್ಳಬೇಕೆಂದು ವಿನಂತಿ.

ಮೈಸೂರು :

ಸಿ.ಐ.ಟಿ.ಯು. ನೇತೃತ್ವದಲ್ಲಿ ಅಣಿನೆರೆದ ಎಂ.ಎಂ.ಸಿ. ಕಾರ್ಮಿಕರು

ಮೈಸೂರಿನ ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿ ತೀವ್ರವಾಗಿ ಕೈಗಾರಿಕೆಗಳು ಬೆಳೆಯುತ್ತಿದ್ದು ಅಷ್ಟೇ ತೀವ್ರವಾಗಿ ಕಾರ್ಮಿಕರ ಶೋಷಣೆ ಹೆಚ್ಚುತ್ತಿದೆ. ನೂತನವಾಗಿ ಆರಂಭವಾದ ಕೈಗಾರಿಕಾ ಘಟಕಗಳಲ್ಲಿ ಆಡಳಿತ ವರ್ಗ ಕಾರ್ಮಿಕರು ಸಂಘಟಿತರಾಗುವುದನ್ನು ಬೆದರಿಕೆ ಒಡ್ಡುವುದರ ಮೂಲಕ ತಡೆಯುತ್ತಿದ್ದಾರೆ.

ಮಹೇಂದ್ರ, ಮಹೇಂದ್ರ ಗುಂಪಿನ 'ಎಂ.ಎಂ.ಸಿ.' ಈ ಪ್ರದೇಶದ ದೊಡ್ಡ ಕೈಗಾರಿಕಾ ಘಟಕ. ಕಳೆದ ಕೆಲವು ವರ್ಷಗಳಿಂದ ಆಡಳಿತ ವರ್ಗ ಪೋಷಿತ ಎನ್.ಎಫ್.ಐ.ಟಿ.ಯು. ಸಂಘಟನೆ ಇಲ್ಲಿ ಕೆಲಸ ನಿರ್ವಹಿಸುತ್ತಿದೆ. ಕಾರ್ಮಿಕರ ಯಾವ ಬೇಡಿಕೆಗಳೂ ಈಡೇರಿಸಲ್ಪಡಲಿಲ್ಲ, ನೊಂದ ಎಂ.ಎಂ.ಸಿ. ಕಾರ್ಮಿಕ ಸಮೂಹ ಆಡಳಿತ ವರ್ಗದ ಕೃಪಾ ಪೋಷಿತ ಕಾರ್ಮಿಕ ಸಂಘ ಆಸೆಯನ್ನು ತೊರೆದು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗಲು ನಿರ್ಧರಿಸಿದರು. ಈ ಬಗ್ಗೆ ಮುಖಂಡತ್ವ ವಹಿಸಿದ ಕಾ॥ ಎಚ್. ಎಸ್. ಕೃಷ್ಣರವರನ್ನು ಆಡಳಿತ ವರ್ಗ ಕೆಲಸದಿಂದ ಕಿತ್ತುಹಾಕಿತು. ಅಪಾಯವನ್ನು ಅರಿತ ಕಾರ್ಮಿಕ ವರ್ಗ ಐಕ್ಯವಾಗಿ ನಿಂತು ಸಿ.ಐ.ಟಿ.ಯು. ಸಂಯೋಜಿತವಾದ ಎಂ. ಎಂ. ಸಿ. ಎಂಪ್ಲಾಯಿಸ್ ಅಸೋಸಿಯೇಶನನ್ನು ರಚಿಸಿದರು.

ಉದ್ಘಾಟನಾ ಸಮಾರಂಭ :

16-11-1983ರಂದು ಎಂ.ಎಂ.ಸಿ ಕಾರ್ಖಾನೆಯ ವಠಾರದಲ್ಲಿ ಎಂ.ಎಂ.ಸಿ. ಎಂಪ್ಲಾಯಿಸ್ ಎಸೋಸಿಯೇಶನ್ ಉದ್ಘಾಟನಾ ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಮೈಸೂರು ಜಿಲ್ಲಾ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾ॥ ಎಂ. ಎನ್. ಉಗ್ರಪ್ಪನವರು ಸಂಘಟನೆಯನ್ನು ಉದ್ಘಾಟಿಸಿದರು. ಸಿ.ಐ.ಟಿ. ಯು. ಜಿಲ್ಲಾ ಕಾರ್ಯದರ್ಶಿ ಹಾಗೂ ಎಂ.ಎಂ.ಸಿ. ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾ॥ ಆರ್. ಮೋಹನ್ ಕುಮಾರ್‌ರವರು ಸಭೆಯ ಅಧ್ಯಕ್ಷತೆ ವಹಿಸಿದರು. ಎಸ್.ಎಫ್.ಐ. ಅಧ್ಯಕ್ಷರಾದ ಕಾ॥ ಆರ್. ಜಯಕುಮಾರ್, ವಿಕ್ರಾಂತ್ ಟೈರ್ಸ್ ಕಾರ್ಮಿಕ ಸಂಘದ ಸಮಿತಿ ಸದಸ್ಯ ಕಾಂ. ಜಿ. ಜಯರಾಂ, ರೈತ ಸಂಘದ ಮಹದೇವಪ್ಪನವರು ಸಂಘಟನೆಗೆ ಬೆಂಬಲ ಕೋರಿ ಮಾತನಾಡಿದರು.

ಸಮಿತಿ ಪದಾಧಿಕಾರಿಗಳು :

ಎಂ.ಎಂ.ಸಿ. ಎಂಪ್ಲಾಯೀಸ್ ಅಸೋಸಿಯೇಷನ್ ಇತ್ತೀಚೆಗೆ ನಡೆಸಿದ ಸರ್ವ ಸದಸ್ಯರ ಸಭೆಯಲ್ಲಿ ಸಂಘಟನೆಗೆ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು,

ಕಾಂ. ಪಿ ಎಸ್. ಸೂರ್ಯನಾರಾಯಣ ರಾವ್ (ಗೌರವ ಅಧ್ಯಕ್ಷರು), ಕಾಂ. ಆರ್. ಮೋಹನ್‌ಕುಮಾರ್ (ಪ್ರಧಾನ ಕಾರ್ಯದರ್ಶಿ), ಕಾಂ, ಎ.ಕೆ. ಲಾರೆನ್ಸ್ (ಉಪಾಧ್ಯಕ್ಷರು), ಕಾಂ, ಎನ್, ಮೋಹನ್ ಕುಮಾರ್ (ಪ್ರಧಾನ ಕಾರ್ಯದರ್ಶಿ), ಕಾ॥ ಎಚ್. ಎಸ್. ಕೃಷ್ಣ ಮತ್ತು ಧನರಾಜ್ (ಸಹ ಕಾರ್ಯದರ್ಶಿಗಳು), ಎಸ್. ಸುರೇಶ್‌ಕುಮಾರ್ (ಖಜಾಂಚಿ).

ಬೇಡಿಕೆಗಳು :

ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗಿರುವ ಕಾರ್ಮಿಕರು ಈ ಕೆಳಗಿನ ಮುಖ್ಯ ಬೇಡಿಕೆಗಳನ್ನು ಆಡಳಿತ ವರ್ಗದ ಮುಂದಿರಿಸಿದೆ. 1) ವಜಾ ಮಾಡಿರುವ ಕಾರ್ಮಿಕರನ್ನು ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳಬೇಕು, 2) ಕೆಲಸದ ಭದ್ರತೆ ಒದಗಿಸಬೇಕು 3) ರಜಾ ಸೌಲಭ್ಯ ಸರಿಯಾಗಿ ಒದಗಿಸಬೇಕು, ಮತ್ತು 4) ಬಸ್ ಮತ್ತು ಕ್ಯಾಂಟೀನ್ ದರಗಳನ್ನು ಇಳಿಸಬೇಕು, ಈ ಬೇಡಿಕೆಗಳು ಈಡೇರದಿದ್ದಲ್ಲಿ ಹೋರಾಟ ನಡೆಸಲು ಕಾರ್ಮಿಕರು ನಿರ್ಧರಿಸಿದ್ದಾರೆ.

ಗುಲ್ಬರ್ಗಾ :

ರೈತ ಮುಖಂಡರ ಸಭೆ

ದಿನಾಂಕ 12-11-83 ರಂದು ಗುಲ್ಬರ್ಗಾ ಜಿಲ್ಲೆಯ ರೈತ ಸಂಘದ ಜಿಲ್ಲಾ ಸಮಿತಿಯ ಪದಾಧಿಕಾರಿಗಳು, ತಾಲ್ಲೂಕಾ ಘಟಕದ ಪದಾಧಿಕಾರಿಗಳು ಮತ್ತು ಗ್ರಾಮ ಘಟಕದ ಪದಾಧಿಕಾರಿಗಳು ಮೇಘರಾಜ ಕಠಾರೇ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರೈತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಪ್ರೊ॥ ಆರ್. ಕೆ. ಹುಡಗಿ ಮತ್ತು ಕಾ॥ ಸಿ, ಎ. ಪಾಟೀಲ್ ವಕೀಲರು ಆಗಮಿಸಿದ್ದರು. ಸಭೆಯಲ್ಲಿ ಮಾತನಾಡುತ್ತಾ ರೈತ ಸಂಘದ ಕಾರ್ಯಕರ್ತರು ರೈತರ ದಿನನಿತ್ಯದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ರೈತ ಸಂಘವನ್ನು ಸರಿಯಾದ ರೀತಿಯಲ್ಲಿ ಕಟ್ಟಲು ಪದಾಧಿಕಾರಿಗಳಿಗೆ ಕರೆಕೊಟ್ಟರು.

ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಲ್ಲಪ್ಪಾ ಕಿರಣಗಿ ಅವರು ಸಂಘಟನೆಯ ಬಗ್ಗೆ ವರದಿ ಮಾಡಿದರು; ಅವರು ಸಭೆಯಲ್ಲಿ ಮಾತನಾಡುತ್ತಾ ಸಂಘಟನೆಯನ್ನು ಜಿಲ್ಲೆಯ ಎಲ್ಲಾ ಹಳ್ಳಿಗಳಿಗೆ ವಿಸ್ತರಿಸಿ ಬಲಿಷ್ಠ ಸಂಘಟನೆಯನ್ನು ಕಟ್ಟಲು ಪದಾಧಿಕಾರಿಗಳಿಗೆ ಕರೆಕೊಟ್ಟರು. ಸಭೆಯಲ್ಲಿ ದೀರ್ಘವಾದ ಚರ್ಚೆ ನಡೆದು ರೈತ ಸಮಸ್ಯೆಗಳನ್ನು ಬಗೆಹರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಫೆಬ್ರವರಿ 1984ರಲ್ಲಿ ಜಿಲ್ಲಾದ್ಯಾಂತ ಹೋರಾಟ ನಡೆಸುವ ನಿರ್ಣಯವನ್ನು ಸಭೆ ಅಂಗೀಕರಿಸಿತು.

ಅನೇಕ ವರ್ಷಗಳಿಂದ ಸರ್ಕಾರಿ ಜಮೀನಲ್ಲಿ ಸಾಗುವಳಿ ಮಾಡುತ್ತಾ ಬಂದಿರುವ ಭೂಹೀನ ಕೃಷಿ ಕಾರ್ಮಿಕರಿಗೂ ಹಕ್ಕು ಪತ್ರಗಳನ್ನು ನೀಡುವ ಭೂಮಿಗಾಗಿ ಹೋರಾಟ ಕಾರ್ಯಕ್ರಮಗಳನ್ನು ಮತ್ತು ಈ ವರ್ಷದ ಭಾರಿ ಮಳೆಯಿಂದ ತೊಂದರೆಗೊಳಗಾದ ಕಲಬುರ್ಗಿ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕೆಂದು 60ವರ್ಷ ಮೀರಿರುವ ಕೃಷಿ ಕಾರ್ಮಿಕರಿಗೆ ಪೆನ್‌ಶನ್ ನೀಡಬೇಕೆಂದು ಮತ್ತು ಎಲ್ಲಾ ಹಳ್ಳಿಗಳಿಗೂ ನ್ಯಾಯ ಬೆಲೆ ಅಂಗಡಿಯ ಮೂಲಕ ಯೋಗ್ಯ ದರದಲ್ಲಿ ಧಾನ್ಯಗಳನ್ನು ಪೂರೈಸಬೇಕೆಂದು ಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸುವ ಗೊತ್ತುವಳಿಯನ್ನು ಸಭೆ ಅಂಗೀಕರಿಸಿತು. —

ಕುಂದಾಪುರ :

ಬಸ್ ದರ ಏರಿಕೆ ವಿರುದ್ಧ ಎಸ್.ಎಫ್.ಐ. ಪ್ರದರ್ಶನ

ಇತ್ತೀಚೆಗೆ ಕರ್ನಾಟಕ ಸರಕಾರ ಕೆ. ಎಸ್.ಆರ್.ಟಿ.ಸಿ. ಬಸ್ ಪ್ರಯಾಣ ದರ ಏರಿಸಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (SFI) ಕುಂದಾಪುರ ನಗರ ಸಮಿತಿಯು ಖಂಡಿಸಿ ರಾಜ್ಯದ ಸಾರಿಗೆ ಮಂತ್ರಿಗಳಿಗೆ ತಂತಿಯನ್ನು ಕಳುಹಿಸಿದೆ.

ಕೆ. ಎಸ್. ಆರ್. ಟಿ. ಸಿ. ಬಸ್ ಪ್ರಯಾಣ ದರ ಏರಿಕೆಯನ್ನು ವಿರೋಧಿಸಿ 19-11-83ರಂದು SFI ನಗರ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ನಗರ ಸಮಿತಿ ಕಾರ್ಯದರ್ಶಿ ಕೆ. ವಿಶ್ವನಾಥರ ನೇತೃತ್ವದಲ್ಲಿ ಕೆ.ಎಸ್.ಆರ್. ಟಿ,ಸಿ. ಕುಂದಾಪುರ ನಿಯಂತ್ರಣಕಚೇರಿ ಎದುರು ನಡೆದ ವಿದ್ಯಾರ್ಥಿಗಳ ಪ್ರದರ್ಶನದಲ್ಲಿ ಪ್ರಯಾಣ ದರ ಏರಿಕೆಯ ಸರಕಾರದ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿ, ಅಧಿಕಾರಿಗಳ ಮುಖಾಂತರ ರಾಜ್ಯ ಸಾರಿಗೆ ಮಂತ್ರಿಗಳಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು. ಭಿತ್ತಿಪತ್ರಗಳನ್ನು ನಗರದಲ್ಲಿ ಅಂಟಿಸಲಾಯಿತು.

ಪುರಸಭಾ ಚುನಾವಣೆ ಪೌರ ಸಮಿತಿಯ ರಚನೆ

ಕಾಂಗ್ರೆಸ್(ಐ) ಸರ್ವಾಧಿಕಾರವನ್ನು ಬಿ.ಜೆ.ಪಿ.ಯ ಕೋಮುವಾದವನ್ನೂ ಸೋಲಿಸಲು ಮತ್ತು ಪುತ್ತೂರಿನ ನಾಗರಿಕರಿಗೆ ಶಾಂತ ಹಾಗೂ ದಕ್ಷ ಆಡಳಿತವನ್ನೊದಗಿಸಲು ಪೌರ ಸಮಿತಿಯನ್ನು ತಾ॥ 2-11-83 ರಂದು ರಚಿಸಲಾಯಿತು. ಈ ಸಮಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಜನತಾ, ಮುಸ್ಲಿಂಲೀಗ್ ಹಾಗೂ ಪಕ್ಷಾತೀತ ಅಭ್ಯರ್ಥಿಗಳು ಒಳಗೊಂಡಿರುತ್ತಾರೆ. ಈ ಎಲ್ಲಾ ಪಕ್ಷಗಳು ಹಾಗೂ ಅಭ್ಯರ್ಥಿಗಳು ಪಕ್ಷಾತೀತ ನೆಲೆಯಲ್ಲಿ ಕಾಂಗ್ರೆಸ್ (ಐ) ಹಾಗೂ ಬಿ.ಜೆ.ಪಿ.ಯನ್ನು ಸೋಲಿಸಿ ಮೂರನೆಯ ರಂಗದ ಉದಯದ ಮೂಲಕ ಪುತ್ತೂರಿನ ಪೌರರಿಗೆ ಉತ್ತಮ ಆಡಳಿತ ಮತ್ತು ತುರ್ತು ಸಮಸ್ಯೆಗಳ ಪರಿಹಾರ ಮಾಡುವಲ್ಲಿ ಶ್ರಮಿಸಲು ನಿರ್ಧಾರ ತಳೆಯಲಾಯಿತು.

ಪುತ್ತೂರು ಪುರಸಭೆಯಾಗಿ ಹಲವಾರು ವರ್ಷಗಳು ಕಳೆದರೂ ನಗರ ವ್ಯಾಪ್ತಿಯೊಳಗೆ ಆಗಬೇಕಾಗಿದ್ದ ಅಗತ್ಯವಾದ ಕೆಲಸಗಳು ಒಳ ರಾಜಕೀಯದಿಂದಾಗಿ ಕುಂಠಿತಗೊಳ್ಳುತ್ತಾ ಬಂದಿದೆ. ಕುಡಿಯುವ ನಲ್ಲಿ ನೀರಿನ ಸರಬರಾಜು ಯೋಜನೆ, ಒಳ ಚರಂಡಿ ಯೋಜನೆ ರಚನೆಯ ಅರ್ಧ ಹಂತದಲ್ಲೇ ಸ್ಥಗಿತಗೊಂಡಿರುವ ಪುರಸಭಾ ಭವನ ಅವ್ಯವಸ್ಥೆ ಹೊಂದಿರುವ ಸಂತೆ ಮೈದಾನ ಮೊದಲಾದ ಕೆಲಸಗಳು ಇನ್ನೂ ಪೂರ್ಣಗೊಳ್ಳಲೇ ಇಲ್ಲ.

ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಐಕ್ಯ ಹೋರಾಟದಿಂದ ಸಾಧ್ಯವೆಂದು ಮನಗಂಡ ಪ್ರಜ್ಞಾವಂತ ಪೌರರು ಎರಡೂ ರಾಜಕೀಯ ಬಣಗಳನ್ನು ತಿರಸ್ಕರಿಸಿ ಪೌರ ಸಮಿತಿಯ ಮೂಲಕ ಪುರಸಭಾ ಅಧಿಕಾರ ಪಡೆದುಕೊಳ್ಳಲು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು ನೀಗಲು ಪಕ್ಷಾತೀತ ನೆಲೆಯಲ್ಲಿ ಸಂಘಟಿತ ಹೋರಾಟದ ದಾರಿ ಗುರುತಿಸಿಕೊಂಡಿದ್ದಾರೆ.

ಈ ಪೌರ ಸಮಿತಿಯನ್ನು ಸ್ಥಾಪಿಸುವಲ್ಲಿ ಪುತ್ತೂರಿನ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷ ಪ್ರಮುಖ ಪಾತ್ರವನ್ನು ವಹಿಸಿತು.

ಈ ಹಿನ್ನೆಲೆಯಲ್ಲಿ ತಾ॥ 2-11-83 ರಂದು ಜರಗಿದ ಸಭೆಯಲ್ಲಿ ಈ ಕೆಳಗಿನವರನ್ನು ಪೌರ ಸಮಿತಿಯ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

ಅಧ್ಯಕ್ಷ, ಶ್ರೀ ಕೆ. ಪಿ. ಶೆಟ್ಟಿ (ಮಾಜಿ ಪುರಸಭಾಧ್ಯಕ್ಷರು) ಕಾರ್ಯದರ್ಶಿ ಮತ್ತು ಖಜಾಂಚಿ, ಶ್ರೀ ಬೋಳಂತ ಕೋಡಿ ಈಶ್ವರಭಟ್ (ಹೆಸರಾಂತ ನ್ಯಾಯವಾದಿ).

ಸಮಿತಿಯ ಸದಸ್ಯರು :

ಕಾ॥ ಬಿ. ರಾಮಕೃಷ್ಣ, ಶ್ರೀ ಯು. ಪಿ. ಶಿವರಾಮ, ನ್ಯಾಯವಾದಿ, ಪುತ್ತೂರು, ಶ್ರೀ ಕೆ. ಗೋಪಾಲಕೃಷ್ಣ ಭಟ್ (ಮಾಜಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು), ಕಾ॥ ಪಿ. ಎಸ್. ಅಹಮ್ಮದ್ ಥೋಮಸ್, ತೋರಾಸ್, ಚಿಕ್ಕ ಅಂಗಡಿಗಾರರು, ಅಪರಾಜಿತ ಜೈನ್-ರೇಡಿಯೋ ವ್ಯಾಪರಸ್ಥರು, ಇತಾಕ್‌ಖಾನ್ - ಮುಸ್ಲಿಂ ಲೀಗಿನ ಅಧ್ಯಕ್ಷರು.

ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರವನ್ನು ಈ ಸಮಿತಿಗೆ ನೀಡಲಾಯಿತು. ಈ ಸಭೆಯಲ್ಲಿ 21 ಜನರು ಹಾಜರಿದ್ದರು.

29-10-83 ರಂದು ಮೈಸೂರು ಕಿರ್ಲೋಸ್ಕರ್ ಎಂಪ್ಲಾಯಿಸ್ ಅಸೋಸಿಯೇಶನ್‌ನ ಹರಿಹರ ಶಾಖೆಯ ಪದಾಧಿಕಾರಿಗಳ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಗಳ ವಿವರ ಈ ರೀತಿ ಇದೆ,

ಪದವಿ ಚುನಾಯಿತ ಅಭ್ಯರ್ಥಿ ಮತ್ತು ಪಡೆದ ಶೇಕಡ ಮತಗಳು :

ಅಧ್ಯಕ್ಷರು :
ವಿ. ಜೆ. ಕೆ. ನಾಯರ್, 62.30,
ಉಪಾಧ್ಯಕ್ಷರು :
ವಿ. ಎನ್. ಪಳಕಟ್ಟ, 59.90,
ಕಾರ್ಯದರ್ಶಿ :
ಹೆಚ್. ಜಿ. ಭೀಮರೆಡ್ಡಿ, 56.35
ಸಹಾಯಕ ಕಾರ್ಯದರ್ಶಿಗಳು :
ಪಿ. ವೈ. ಪಾಟೀಲ್, 55.55,
ಖಜಾಂಚಿ ಚಿಕ್ಕಣ್ಣಾಚಾರಿ 55.60

ಮೈಸೂರು

ಸಿ.ಐ.ಟಿ.ಯು. ನ ಪ್ರಚಂಡ ವಿಜಯ

ಚುನಾಯಿತ ಆರೂ ಪದಾಧಿಕಾರಿಗಳು ಸಿ.ಐ.ಟಿ.ಯು ಅಭ್ಯರ್ಥಿಗಳು ಕಾರ್ಯಕಾರಿ ಸಮಿತಿಯ 20 ಸ್ಥಾನಗಳಲ್ಲಿ 13 ಸ್ಥಾನಗಳನ್ನು ಸಿ.ಐ.ಟಿ.ಯು ಗೆದ್ದುಕೊಂಡಿದೆ. ಸಿ. ಐ. ಟಿ. ಯು. ಅಭ್ಯರ್ಥಿಗಳು ಒಟ್ಟು ಶೇಕಡ 55 ಮತಗಳನ್ನು ಪಡೆದರು. ಚುನಾಯಿತ ಸಿ.ಐ.ಟಿ.ಯು. ಅಭ್ಯರ್ಥಿಗಳ ಹೆಸರುಗಳು ಈ ರೀತಿ ಇವೆ. ಕರಿನಿಂಗಪ್ಪ, ಅಬ್ದುಲ್ ಖಾದರ್, ಶಿವರಾಮಪ್ಪ ಮತ್ತು ಹನುಮಂತಪ್ಪ (ಎಲ್ಲರೂ ಫೌಂಡ್ರಿ ವಿಭಾಗದಿಂದ) ಭಾಸ್ಕರ್, ಲಕ್ಕಣ್ಣ, ಚನ್ನಬಸವಯ್ಯ ಜಯಣ್ಣ ಮತ್ತು ಲಕ್ಷಣ (ಸಿ.ಎಲ್. ಡಿ. ವಿಭಾಗದಿಂದ) ಪ್ರೇಮನಾಥ್, ಮರಳಿಸಿದ್ದಯ್ಯ, ಪ್ರಕಾಶ ಮತ್ತು ರಮೇಶ (ಹರ್ಬಟ್ ವಿಭಾಗದಿಂದ)

ಸಿ. ಐ. ಟಿ. ಯು. ಅಭ್ಯರ್ಥಿಗಳಿಗೆ ಎದುರಾಗಿ ಸಿ.ಪಿ.ಐ. ಹಾಗೂ ಆರ್. ಎಸ್.ಎಸ್. ಜತೆಗೂಡಿದ್ದ ಸಂಯೋಜಕ ಸಮಿತಿಯ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. [ಬಿ.ಜೆ.ಪಿ. ಹಾಗೂ ಆರ್. ಎಸ್.ಎಸ್. ವಿರುದ್ಧ ಅಬ್ಬರದ ಮಾತುಗಳನ್ನಾಡಿ, ಸಿ.ಪಿ.ಐ. (ಎಂ) ಈ ವಿಷಯದಲ್ಲಿ ಬಿಗಿ ನಿಲುವು ತಳೆದಿಲ್ಲವೆಂದು ಜರೆಯುವ ಸಿ. ಪಿ. ಐ. ನಾಯಕರ ನಿಲುವಿನ ಪ್ರಾಮಾಣಿಕತೆಯ ಇನ್ನೂ ನಂಬಿರುವವರು ಇದನ್ನು ಗಮನಿಸಬೇಕು !]

ಕರ್ನಾಟಕ ಪ್ರಗತಿಪರ ಕಲಾರಂಗದಿಂದ

ಕನ್ನಡ ರಾಜ್ಯೋತ್ಸವ

ಬೆಂಗಳೂರಿನ ಕರ್ನಾಟಕ ಪ್ರಗತಿಪರ ಕಲಾರಂಗ (ಸಿ. ಪಿ. ಎ. ಸಿ.)ವು ಕನ್ನಡ ರಾಜ್ಯೋತ್ಸವದ ಅಂಗವಾಗಿ ಫುಟ್‌ಬಾಲ್ ಟೂರ್ನಮೆಂಟೊಂದನ್ನು ಏರ್ಪಡಿಸಿದೆ. ನವಂಬರ್ 1 ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಸಿ.ಪಿ.ಐ.(ಎಂ.) ಶಾಸಕ ಸೂರ್ಯನಾರಾಯಣರಾವ್, ಪೋಲೀಸ್ ಅಧಿಕಾರಿ ಶ್ರೀ ನಾರಾಯಣಸ್ವಾಮಿ, ಡಾ॥ ರೆಡ್ಡಿ ಮತ್ತಿತರರು ಭಾಗವಹಿಸಿದ್ದರು. ಕಾಮ್ರೇಡ್ ವಾರಿಯರ್ ಸ್ವಾಗತಿಸಿ, ಕುಂಜುಪ್ಪನ್ ವಂದಿಸಿದರು. ನವಂಬರ್ 1 ರಿಂದ 13ರ ವರೆಗೆ ನಡೆಯುವ ಈ ಟೂರ್ನಿಮೆಂಟಿನಲ್ಲಿ ಒಟ್ಟು 15 ತಂಡಗಳು ಭಾಗವಹಿಸುತ್ತಿವೆ. —

ಜನತಾ ಸರ್ಕಾರ ವಾಸ್ತವಿಕ ಕ್ರಮಗಳನ್ನು ಕೈಗೊಳ್ಳಲಿ

—ಸಿ.ಪಿ.ಐ.(ಎಂ.) ರಾಜ್ಯ ಸಮಿತಿ

ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು ನವೆಂಬರ್ 4 ಮತ್ತು 5 ರಂದು ಸಭೆ ಸೇರಿ ರಾಜ್ಯದ ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಪರಿಶೀಲಿಸಿ ಕೆಳಗಿನ ನಿರ್ಣಯಗಳನ್ನು ಕೈಗೊಂಡಿದೆ.

ಗ್ರೆನಡಾದ ಮೇಲೆ ಅಮೇರಿಕನ್ ಧಾಳಿ :

ಸರ್ವಸಂತ್ರ ಸರ್ವ ತಂತ್ರಗಣರಾಜ್ಯದೊಂದರ ಆಂತರಿಕ ವ್ಯವಹಾರದಲ್ಲಿ ನೇರ ಹಸ್ತಕ್ಷೇಪ ಮಾಡಿ ಕ್ರಾಂತಿಕಾರಿ ಸರ್ಕಾರವನ್ನುರುಳಿಸಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಗ್ರೆನಡಾದ ಮೇಲೆ ಮಾಡಿದ ದುರಾಕ್ರಮಣ ತೀವ್ರ ಖಂಡನೆಗೆ ಅರ್ಹ. ಸ್ವಯಂ ನೇಮಿಂತ ಈ ಜಾಗತಿಕ ಪೋಲಿಸ್ ಅಮೇರಿಕದ ವರ್ತನೆ ಜಗತ್ತಿನ ಸ್ವತಂತ್ರ ಗಣರಾಜ್ಯಗಳ ಉಳಿವಿಗೇ ಅಪಾಯಕಾರಿ. ಅಮೇರಿಕಾ ಎಸಗಿದ ಹೊಸ ಪಾತಕವನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಖಂಡಿಸುತ್ತದೆ.

ಶಾಂತಿ ಚಳುವಳಿ :

ಜಗತ್ತಿನಲ್ಲಿ ಯುದ್ಧಭಯ ಅಕ್ರಮಣದ ಭೀತಿ ಹಬ್ಬುತ್ತಿರುವ ವೇಳೆಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಅಣ್ವಸ್ತ್ರ ತಯಾರಿಕೆ ಬೃಹತ್‌ಪ್ರಮಾಣದಲ್ಲಿ ಸಾಗುತ್ತಿರುವ ವೇಳೆಯಲ್ಲಿ ಬ್ರಿಟನ್, ಅಮೇರಿಕ, ಯುರೋಪಿನಲ್ಲೆಡೆಯಲ್ಲಿ ಜನತೆ ನಡೆಸುತ್ತಿರುವ ವಿಸ್ತೃತವಾದ ಅತ್ಯಪೂರ್ವ ಶಾಂತಿ ಚಳುವಳಿಯನ್ನು ರಾಜ್ಯ ಸಮಿತಿ ಸ್ವಾಗತಿಸುತ್ತದೆ. ಇದೇ ವೇಳೆಯಲ್ಲಿ ನಮ್ಮ ಮೇಲೆ ಕೂಡ ಕೂಗುತ್ತಿರುವ ಈ ಯುದ್ಧದ ಅಪಾಯವನ್ನೆದುರಿಸಲು, ಮಾರಕ ಅಣುಯುದ್ಧದ ಪ್ರಯತ್ನಗಳ ವಿರುದ್ಧ ಶಾಂತಿಪ್ರಿಯ ಜನತೆಯನ್ನು ಸಂಘಟಿಸಿ ನಮ್ಮ ರಾಜ್ಯದಲ್ಲಿಯೂ ಸಾಮೂಹಿಕ ಚಳುವಳಿಯಾಗಿ ಬೆಳೆಸಲು ರಾಜ್ಯ ಸಮಿತಿ ತೀರ್ಮಾನಿಸಿದೆ.

ಕೇಂದ್ರ ರಾಜ್ಯ ಸಂಬಂಧ :

ದೇಶದಲ್ಲಿನ ಸರ್ವಾಧಿಕಾರಿ ಆಡಳಿತ ನೀತಿಯ ಫಲವಾಗಿ ವಿಚ್ಛಿದ್ರ ಶಕ್ತಿಗಳು ವೃದ್ಧಿಯಾಗುತ್ತಿವೆ. ರಾಜ್ಯಗಳ ಆದಾಯಗಳ ಮೇಲಿನ ಕೇಂದ್ರದ ಧಾಳಿಯಿಂದಾಗಿ ರಾಜ್ಯಗಳು ಸ್ವಾಯತ್ತತೆ ಹರಣವಾಗುತ್ತಿದೆ. ಈ ಹಿನ್ನಲೆಯಲ್ಲಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರಕ್ಕಾಗಿ ಇತರ ಕಾಂಗ್ರೆಸ್ಸೇತರ ಸರ್ಕಾರಗಳೊಡಗೂಡಿ ಹೋರಾಡುತ್ತಿರುವ, ಜನತಾ ಸರ್ಕಾರದ ನೀತಿಯನ್ನು ರಾಜ್ಯ ಸಮಿತಿ ಸ್ವಾಗತಿಸುತ್ತದೆ. ದೇಶದ ಸಮಗ್ರತೆಯನ್ನು ಕಾಪಾಡುವಲ್ಲಿ, ರಾಜ್ಯಗಳ ಅಭಿವೃದ್ಧಿ ಪ್ರಯತ್ನಗಳಿಗೆ ಚಾಲನೆ ಒದಗಿಸಲು ಕರ್ನಾಟಕ ರಾಜ್ಯದ ಜನತೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಕರೆ ಕೊಡುತ್ತದೆ.

ಬೆಲೆ ಏರಿಕೆ :

ನಿತ್ಯೋಪಯೋಗಿ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿರುವ ಪರಿಣಾಮವಾಗಿ ದುಡಿಯುವ ವರ್ಗದ ಜೀವನ ಮಟ್ಟ ಕುಸಿಯುತ್ತಿದೆ. ಕೇಂದ್ರ ಸರಕಾರದ ದಿವಾಳಿಕೋರ ಆರ್ಥಿಕ ನೀತಿಗಳ ಫಲವಾಗಿ, ಐ. ಎಂ. ಎಫ್. ಸಾಲದ ಷರತ್ತುಗಳಿಗನುಸಾರವಾಗಿ ಕೈಗೊಳ್ಳುತ್ತಿರುವ ಕ್ರಮಗಳ ಫಲವಾಗಿ ಬೆಲೆ ಏರಿಕೆ ತಡೆಯಿಲ್ಲದಂತೆ ಏರಿದೆ. ಇಂತಹ ಸಂದರ್ಭದಲ್ಲಿ ಬೆಲೆ ಏರಿಕೆಯನ್ನು ತಡೆಯಲು ವಿಫಲವಾದ ಕೇಂದ್ರ ಸರ್ಕಾರದ ಬಗ್ಗೆ ರಾಷ್ಟ್ರವ್ಯಾಪೀ ಸಾಮೂಹಿಕ ಚಳುವಳಿಯನ್ನು ರೂಪಿಸಲು ವಿರೋಧ ಪಕ್ಷಗಳು ತೆಗೆದುಕೊಂಡಿರುವ ನಿರ್ಧಾರವನ್ನು ರಾಜ್ಯ ಸಮಿತಿ ಸ್ವಾಗತಿಸುತ್ತದೆ. ರಾಜ್ಯದಲ್ಲಿ ಈಗಾಗಲೇ ಬೆಲೆ ಏರಿಕೆ ಬಗ್ಗೆ ಅನೇಕ ಜಿಲ್ಲೆಗಳಲ್ಲಿ ಚಳುವಳಿಯನ್ನು ನಡೆಸಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ರಾಜ್ಯದಲ್ಲಿಯೂ ಕೂಡ ಬೆಲೆ ಏರಿಕೆಗೆ ಇಂಬು ಕೊಡುವ ಕೇಂದ್ರದ ಧೋರಣೆಗಳನ್ನು ವಿರೋಧಿಸುವ ಸಾಮೂಹಿಕ ಚಳುವಳಿಯನ್ನು ರೂಪಿಸಬೇಕೆಂದು ಕರೆ ಕೊಡುತ್ತದೆ. ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಬೆಲೆ ಏರಿಕೆಯ ಬಗ್ಗೆ ಚಳುವಳಿಯ ಮಾತನ್ನಾಡುತ್ತಿರುವ ಕಾಂಗ್ರೆ ಪಕ್ಷದ ನೀತಿಯನ್ನು ಬಯಲಿಗೆಳೆಯಬೇಕೆಂದು ಅಭಿಪ್ರಾಯಪಡುತ್ತದೆ.

ಜನತಾ ಸರ್ಕಾರದ ಬೆಲೆ ಏರಿಕೆ ನೀತಿಗೊಂದು ಪರ್ಯಾಯ :

ಅದೇ ಸಂದರ್ಭದಲ್ಲಿ ರಾಜ್ಯದಲ್ಲಿ ಜನತಾ ಸರಕಾರ ಒಂದರ ನಂತರ ಒಂದು ಬೆಲೆ ಏರಿಕೆಯನ್ನು ಘೋಷಿಸುತ್ತಾ ಬಂದಿದೆ. ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಕಾಂಗ್ರೆ ಸರಕಾರದ ದಾರಿಯನ್ನು ತುಳಿಯುತ್ತಾ ವಿಶಾಲ ಜನಸಮೂಹದ ಮೇಲೆ ಕರಭಾರ ಹೇರಿ, ಬೆಲೆ ಏರಿಕೆ ಅವರ ಜೀವನವನ್ನು ದುರ್ಭರ ಮಾಡುವುದನ್ನು ತ್ಯಜಿಸಿ ಶ್ರೀಮಂತ ಕೈಗಾರಿಕೋದ್ಯಮಿಗಳು, ವ್ಯಾಪಾರಸ್ಥರು ಜಮೀನುದಾರರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಬೇಕೆಂದು ಆಡಳಿತದ ಅಪವ್ಯಯ ಕಡಮೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಅಭಿಪ್ರಾಯ ಪಡುತ್ತದೆ.

ಕಾಂಗ್ರೆ ಅಪಪ್ರಚಾರ :

ಜನತಾ ಸರಕಾರದ ಉಳಿವಿನ ಬಗ್ಗೆ ಜನರ ಮನಸ್ಸಿನಲ್ಲಿ ಶಂಕೆ ಆತಂಕಗಳನ್ನುಂಟು ಮಾಡಲು ದಿನಕ್ಕೊಂದು ಹೇಳಿಕೆ ನೀಡಿ ಕಾಂಗ್ರೆ ನಡೆಸುತ್ತಿರುವ ಅಪಪ್ರಚಾರವನ್ನು ಖಂಡಿಸುತ್ತದೆ. ಅಧಿಕಾರವನ್ನೆಂದೂ ಬಿಟ್ಟಿರಲಾರದ ಕಾಂಗ್ರೆ ನಾಯಕರ ಕುಟಿಲ ಯತ್ನಗಳನ್ನು ಖಂಡಿಸುತ್ತದೆ. ಅವರ ಅಸಂಖ್ಯಾತ ಹೇಳಿಕೆಗಳಲ್ಲಿ ಏನೂ ಹುರುಳಿಲ್ಲವೆಂಬುದನ್ನು ಸ್ಪಷ್ಟಪಡಿಸಬಯಸುತ್ತದೆ.

ಅಧಿಕಾರ ವರ್ಗ ಕಾರ್ಯಪ್ರವೃತ್ತರಾಗುವುದನ್ನು ತಡೆಗಟ್ಟುವುದೇ ಈ ಅಪ ಪ್ರಚಾರದ ಉದ್ದೇಶವಾಗಿದೆ.

ವಾಸ್ತವಿಕ ಕ್ರಮಗಳನ್ನು ಕೈಗೊಳ್ಳಲಿ :

ಕಾಂಗ್ರೆ ಸರ್ಕಾರದಂತೆಯೇ ಅಬ್ಬರದ, ಅಗ್ಗದ ಜನಪ್ರಿಯತೆ ಗಳಿಸುವ ಈಗಾಗಲೇ ಬೇರೆ ಬೇರೆ ಹೆಸರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳನ್ನು ಬಿಟ್ಟು ವಾಸ್ತವಿಕವಾದ ಅನುಷ್ಠಾನಕ್ಕೆ ಬರುವಂತಹ ಕಾರ್ಯಕ್ರಮಗಳನ್ನು ಜನತಾ ಸರ್ಕಾರ ರೂಪಿಸಲೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯಪಡುತ್ತದೆ. ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಕನಿಷ್ಟ ಕೂಲಿ, ಈ ಪ್ರಮಾಣದ ಕೂಲಿ ದೊರೆಯದ ಎಲ್ಲ ಸಮಯದಲ್ಲೂ ಕೃಷಿ ಕಾರ್ಮಿಕರಿಗೆ ಕೆಲಸ ದೊರೆಯುವಂತೆ ದುಡಿಯುವ ಜನ ವಿಭಾಗಗಳಿಗೆ ಈ ಯೋಜನೆಗಳಿಂದ ಪರಿಹಾರ ದೊರೆಯುವಂತೆ ಯೋಜನೆಗಳನ್ನು ರೂಪಿಸಬೇಕೆಂದು ಕರೆ ಕೊಡುತ್ತದೆ.

ಮೈಕೊ ಕಾರ್ಮಿಕರ ಹೋರಾಟ :

ಮೈಕೊ ಕಾರ್ಖಾನೆಯ ಕಾರ್ಮಿಕರು ತಮ್ಮ ಪ್ರಾಥಮಿಕ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟವನ್ನು ರಾಜ್ಯ ಸಮಿತಿ ಬೆಂಬಲಿಸುತ್ತದೆ. ಮೈಕೊ ಆಡಳಿತ ವರ್ಗ ತನ್ನ ಕೈಗೊಂಬೆ ಸಂಘದ ಮೂಲಕ ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ಧೋರಣೆಯನ್ನು, ಕಾರ್ಮಿಕರ ಮೂಲಭೂತ ಸಂಘಟನಾ ಹಕ್ಕುಗಳಿಗೆ ಮನ್ನಣೆ ಕೊಡದ ವರ್ತನೆಯನ್ನು ಖಂಡಿಸುತ್ತದೆ. ಖಾಸ್ ಸಂಘದೊಡನೆ ಆಗಿರುವ ಅಕ್ರಮ ಕಾರ್ಮಿಕ ವಿರೋಧಿ ಒಪ್ಪಂದವನ್ನು ತಳ್ಳಿಹಾಕಲು ಮತ್ತು ಕಾರ್ಮಿಕರ ನ್ಯಾಯಬದ್ಧ ಬೇಡಿಕೆಯಾದ ಚುನಾವಣೆಯನ್ನು ನಡೆಸಲು ಒತ್ತಾಯಿಸುತ್ತದೆ. —

ಗುಲ್ಬರ್ಗಾ ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘದ ಚುನಾವಣೆ ಹೋರಾಟಗಾರರಿಗೆ ಭಾರೀ ಜಯ

ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಶಿಕ್ಷಕೇತರ ಸಂಘದ ಪ್ರತಿಷ್ಠಿತ ಮತ್ತು ತುರುಸಿನ ಚುನಾವಣೆ 29–10–83 ರಂದು ನಡೆದು ಎಲ್ಲಾ ಹನ್ನೊಂದು ಸ್ಥಾನಗಳನ್ನು ಶ್ರೀ ಸಜ್ಜನ್ ಮತ್ತು ಭಜಂತ್ರಿಯವರ ನಾಯಕತ್ವದ ಹೋರಾಟಶೀಲ ಅಭ್ಯರ್ಥಿಗಳು ಪಡೆದುಕೊಂಡಿದ್ದಾರೆ.

1980 ರಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದ ಸಂಘವು ನೌಕರರ ಹಿತಾಸಕ್ತಿಗಾಗಿ ಹೋರಾಟ ನಡೆಸುತ್ತಿದೆ. ವಿಶ್ವವಿದ್ಯಾಲಯದ ಅಧಿಕಾರವರ್ಗ ನೌಕರರ ಸಂಘಟನೆಯನ್ನು ಛಿದ್ರಗೊಳಿಸಲು ತೀವ್ರ ಪ್ರಯತ್ನಗಳನ್ನು ನಡೆಸಿದ್ದರೂ ಕೂಡ ಈ ಸಲದ ಚುನಾವಣೆಯಲ್ಲಿ ಹೋರಾಟಶೀಲ ನಾಯಕತ್ವ ಎಲ್ಲಾ 11 ಸ್ಥಾನಗಳನ್ನು ಗೆದ್ದುಕೊಂಡು ನೌಕರರ ಐಕ್ಯತೆಯನ್ನು ಸಾಬೀತುಪಡಿಸಿದೆ.

ಚುನಾಯಿತರಾಗಿರುವ ಪದಾಧಿಕಾರಿಗಳ ಹಾಗೂ ಕಾರ್ಯಕಾರಿಣೀ ಸದಸ್ಯರ ಹೆಸರುಗಳು ಹೀಗಿವೆ.

ಎಂ. ಬಿ. ಸಜ್ಜನ್, ಅಧ್ಯಕ್ಷ, ಹ. ಹು. ಭಜಂತ್ರಿ, ಪ್ರ. ಕಾರ್ಯದರ್ಶಿ ಎಸ್. ಬಿ. ಉಪಳಾಂವಕರ, ಉಪಾಧ್ಯಕ್ಷ, ಪಿ. ಕೆ. ತಿವಾರಿ, ಸಂಘಟನಾ ಕಾರ್ಯದರ್ಶಿ, ಗೋಪಾಲ ಅಲಗೊಡ, ಖಜಾಂಚಿ.

ಕಾರ್ಯಕಾರಿಣಿ ಸದಸ್ಯರು

ಬಿರಾದಾರ ಡಿ. ವಿ, ಜಗನ್ನಾಥ ಮುಗಳಗಾಂವ, ಮಠಪತಿ ಎಸ್.ಬಿ. ಪಾಟೀಲ ಬಿ. ಹೆಚ್., ಸಿ ಪ್ರಿ ಮ ಹೊದಲೂರ, ಮಠಪತಿ, ಆರ್. ಕೆ. ವಾಲಿಕಾರ ಆರ್. ಆರ್, ಯಮುನಪ್ಪ ಬೋವಿ, ಮಹ್ಮದ್ ಸುಲ್ತಾನ್, ಆರ್. ಎಸ್. ತಳ್ಳಿಳಿ.

ಅಖಿಲ ಭಾರತ ವಿಶ್ವವಿದ್ಯಾಲಯಗಳ ನೌಕರರ ಕಾನ್‌ಫೆಡರೇಶನ್ನಿನ ಏಳನೇ ಸಮ್ಮೇಳನವು ಮಧ್ಯಪ್ರದೇಶದ ರೇವಾದಲ್ಲಿ ಇತ್ತೀಚೆಗೆ ನಡೆದಿದ್ದು ಕರ್ನಾಟಕ ರಾಜ್ಯದಿಂದ ಗುಲ್ಬರ್ಗಾ, ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ ಶಿಕ್ಷಕೇತರ ಪ್ರತಿನಿಧಿಗಳು ಹಾಗೂ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನ ಶಿಕ್ಷಕೇತರ ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಎಂ. ಎಂ. ವೆಂಕಟಮರಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಡಿ. ಸತೀಶ್ ರವರು ಎಕ್ಸಿಕ್ಯೂಟಿವ್ ಕಮಿಟಿ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಅಲ್ಲದೆ ದಕ್ಷಿಣ ಭಾರತ ವಲಯದ ಕಾರ್ಯದರ್ಶಿಯಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಎಂ. ಬಿ. ಸಜ್ಜನ್ ರವರು ಚುನಾಯಿತರಾಗಿದ್ದಾರೆ. —

ಹೊಸಪೇಟೆಯಲ್ಲಿ

"ಡಿ. ವೈ. ಎಫ್. ಐ. ಸ್ಥಾಪನಾ ದಿನಾಚರಣೆ"

3–11–1983 ರಂದು ಹೊಸಪೇಟೆಯ ಬಾಣದಕೇರಿಯಲ್ಲಿ ಡಿ.ವೈ.ಎಫ್.ಐ. ಸ್ಥಾಪನಾ ದಿನಾಚಾರಣೆ ಆಚರಿಸಲಾಯಿತು. ಗುಂಡಿ ಜಂಬಯ್ಯನವರು ಧ್ವಜಾರೋಹಣ ಮಾಡಿದರು. ಕಾಂ! ಶರಣಪ್ಪ ಕಟ್ಟಿಯವರ ಕ್ರಾಂತಿಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾಂ॥ ತಾಯಪ್ಪ ನಾಯಕರವರು ಮಾತನಾಡುತ್ತಾ, ಡಿ.ವೈ.ಎಫ್.ಐ.ನ ಪ್ರಥಮ ಸಮ್ಮೇಳನ ಲೂಧಿಯಾನಾದಲ್ಲಿ ನಡೆದದ್ದನ್ನು ಸ್ಮರಿಸುತ್ತಾ, ಅಂದಿನಿಂದ ಇಲ್ಲಿಯವರೆಗೆ ರಾಷ್ಟ್ರಮಟ್ಟದಿಂದ ಹಿಡಿದು, ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ಕುರಿತಂತೆ ನಡೆಸಿದ ಹೋರಾಟವನ್ನು ವಿವರಿಸಿದರು. ಜಿಲ್ಲಾ ಸಂಚಾಲಕರಾದ ಕಾಂ॥ ಜಂಬಯ್ಯನಾಯಕ ಮಾತನಾಡುತ್ತಾ, ಡಿ.ವೈ.ಎಫ್.ಐ.ನ 2ನೇ ರಾಜ್ಯ ಸಮ್ಮೇಳನವು ಹೊಸಪೇಟೆಯಲ್ಲಿ ನಡೆಯುವುದನ್ನು ವಿವರಿಸಿ. ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಈ ಅವಧಿಯಲ್ಲಿ ರಾಜ್ಯಮಟ್ಟದ ಹೋರಾಟವನ್ನು ಕೈಗೊಳ್ಳುವ ದಿಶೆಯಲ್ಲಿ ಈ ಸಮ್ಮೇಳನದ ಮಹತ್ವವನ್ನು ವಿವರಿಸಿ. ಸಾರ್ವಜನಿಕರು ಈ ಹೋರಾಟದಲ್ಲಿ ಭಾಗಿಯಾಗುವಂತೆ ಕರೆ ಕೊಟ್ಟರು.

ನಂತರ "ನಾಯಿ" ಮತ್ತು "ಬದಲಾವಣೆ" ಎಂಬ ಎರಡು ಬೀದಿ ನಾಟಕಗಳನ್ನು ಡಿ. ವೈ. ಎಫ್. ಐ. ಸಾಂಸ್ಕೃತಿಕ ವಿಭಾಗದಿಂದ ಪ್ರದರ್ಶಿಸಲ್ಪಟ್ಟಿತು. —

ಗ್ರಾಮಲೆಕ್ಕಿಗರ ಅಕ್ರಮದ ವಿರುದ್ಧ ಡಿ ವೈ ಎಫ್ ಐ ಘೇರಾವ್ !

ಕುಂದಾಪುರದ ಕೋಣಿ ಗ್ರಾಮಸ್ಥರಿಗೆ ನೀಡಲಾಗುತ್ತಿದ್ದ ಹೊಸ ಪಡಿತರ ಚೀಟಿಗೆ 60 ಪೈಸೆಯ ಬದಲು ರೂ. 3 ನ್ನು ಅಕ್ರಮವಾಗಿ ವಸೂಲಿಮಾಡಲಾಗುತ್ತಿತ್ತು. ಇದರ ವಿರುದ್ಧ ಸ್ಥಳೀಯ ಡಿ.ವೈ.ಎಫ್‌ಐ, ಕಾರ್ಮಿಕರು ಕಾಂ. ವೆಂಕಟೇಶನಾಯಕ್ ಗುರುರಾಜನಾಯ್ಕ, ಕೆ. ಎನ್. ಸಂಜಯ, ನಾರಾಯಣ ಆಚಾರ್ ಹಾಗೂ ರಾಜೀವ ಶೆಟ್ಟಿ ಇವರ ನೇತೃತ್ವದಲ್ಲಿ ಪಂಚಾಯತ್ ಕಛೇರಿಯ ಮುಂದೆ ಗ್ರಾಮ ಲೆಕ್ಕಿಗರ ಘೇರಾವ್ ನಡೆಸಿದರು. ಇದರಲ್ಲಿ ನೂರಕ್ಕೂ ಹೆಚ್ಚು ಯುವಜನರು ಭಾಗವಹಿಸಿದ್ದರು. ಈ ಬಗ್ಗೆ ತಹಶೀಲ್ದಾರರನ್ನು ಭೇಟಿ ಮಾಡಲಾಯಿತು. ತಹಶೀಲ್ದಾರರು ಈ ಬಗ್ಗೆ ತನಿಖೆ ನಡೆಸಿ ಪ್ರತಿ ಕಾರ್ಡಿಗೆ ಕೇವಲ 60 ಪೈಸೆ ಮಾತ್ರ ವಸೂಲಿ ಮಾಡುವಂತೆ ಆದೇಶ ನೀಡಿದ್ದಾರೆ. —

ಶ್ರೀನಗರ ಸಮ್ಮೇಳನ

ಪ್ರಜಾಪ್ರಭುತ್ವವಾದಿಗಳ ಐಕ್ಯತೆಯ ಪ್ರಕ್ರಿಯೆಯಲ್ಲಿ ಮಹತ್ವದ ಹೆಜ್ಜೆ

—ಇ. ಎಂ. ಎಸ್.

ದೇಶದ ಜ್ವಲಂತ ಸಮಸ್ಯೆಯೊಂದರ ಕುರಿತು ಸಾಧ್ಯವಾದಷ್ಟು ವ್ಯಾಪಕವಾದ ಒಮ್ಮತಕ್ಕೆ ಬಂದ ಶ್ರೀನಗರದ ವಿರೋಧ ಪಕ್ಷಗಳ ಮೂರನೇ ಅಖಿಲ ಭಾರತ ಸಮ್ಮೇಳನ ಭವಿಷ್ಯಕಾರರ ನಿರೀಕ್ಷೆಯನ್ನು ಸುಳ್ಳಾಗಿಸಿದೆ; ಚರಿತ್ರೆ ಪುನರಾವರ್ತನೆಗೊಳ್ಳುವಂತೆ ಮಾಡಿದೆಯೆಂದು ಅಕ್ಟೋಬರ್ 12 ರಂದು ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ಕಾ. ಇ. ಎಂ. ಎಸ್. ನಂಬೂದಿರಿಪಾಡ್‌ರವರು ಹೇಳಿದ್ದಾರೆ.

ಕಳೆದ ನಾಲ್ಕು ತಿಂಗಳಿಂದ ಮೊದಲು ವಿಜಯವಾಡಾ, ನಂತರ ನವದೆಹಲಿ, ಆಮೇಲೆ ಇದೀಗ ಶ್ರೀನಗರದಲ್ಲಿ ನಡೆದ ಸಮ್ಮೇಳನಗಳನ್ನು ಪರಿಶೀಲಿಸಿದರೆ ವಿರೋಧ ಪಕ್ಷಗಳು ಹೆಜ್ಜೆ-ಹೆಜ್ಜೆಯಾಗಿ ಹಲವು ರಾಜಕೀಯ ವಿಷಯಗಳ ಬಗ್ಗೆ ಒಮ್ಮತದೆಡೆಗೆ ಸಾಗುತ್ತಿರುವುದನ್ನು ಕಾಣಬಹುದು ಎಂದು ಅವರು ಹೇಳಿದ್ದಾರೆ. ಮೇ ತಿಂಗಳಲ್ಲಿ ವಿಜಯವಾಡಾದಲ್ಲಿ ನಡೆದ ಸಮೇಳನ ಆರಂಭದ ಹೆಜ್ಜೆಯಾಗಿತ್ತಷ್ಟೆ. ಕಾಂಗ್ರೆಸ್ (ಐ.)ನ ಸರ್ವಾಧಿಕಾರೀ ಆಳ್ವಿಕೆಯನ್ನು ವಿರೋಧಿಸುತ್ತಿರುವ ಎಲ್ಲಾ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ದೇಶದ ಐಕ್ಯತೆಯನ್ನು ಹಾಳುಗೆಡಹುವ ಶಕ್ತಿಗಳ ವಿರುದ್ಧ ಅವಿರೋಧ ಠರಾವನ್ನು ಅಲ್ಲಿ ಅಂಗೀಕರಿಸಿದವು. ದೆಹಲಿಯಲ್ಲಿ ಜೂನ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಭಾಗವಹಿಸಿದವರ ಸಂಖ್ಯೆ ಕಡಿಮೆಯಾದರೂ ಪಂಜಾಬ್ ಸಮಸ್ಯೆಯೂ ಸೇರಿದಂತೆ ಪರಿಹಾರ ಕಾಣದೆ ದೇಶವನ್ನು ಕಾಡುತ್ತಿದ್ದ ಹಲವು ಸಮಸ್ಯೆಗಳ ಬಗ್ಗೆ ಮೂರ್ತ ಸಲಹೆಗಳನ್ನು ಸಮ್ಮೇಳನ ಅಂಗೀಕರಿಸಿತು. ಸಮ್ಮೇಳನದಲ್ಲಿ ಅಂಗೀಕರಿಸಿದ ಪಂಜಾಬ್ ಕುರಿತಾದ ಒಮ್ಮತದ ಠರಾವಿನಲ್ಲಿ ಅಕಾಲೀದಳವೂ ಭಾಗಿಯಾಗಿತ್ತು; ಆದರೆ ಕೇಂದ್ರ ಸರಕಾರದ ಹಠಮಾರಿತನದಿಂದಾಗಿಯೇ ಆ ರಾಜ್ಯದ ಪರಿಸ್ಥಿತಿ ತೀರಾ ಬಿಗಡಾಯಿಸಿತು ಎಂಬುದರ ಹಿನ್ನೆಲೆಯಲ್ಲಿ ವಿರೋಧಪಕ್ಷಗಳ ಈ ಸಮ್ಮೇಳನದ ಮಹತ್ವವನ್ನು ತಿಳಿಯಬಹುದು.

ದೆಹಲಿ ಸಮ್ಮೇಳನದಲ್ಲಿ ಎ.ಐ.ಎ. ಡಿ.ಎಂ.ಕೆ. ಹಾಗೂ ಬಿ.ಜೆ.ಪಿ. ಭಾಗವಹಿಸಲಿಲ್ಲ. ಲೋಕದಳ ಮತ್ತು ಜನತಾ ಪಕ್ಷ ಮೊದಲು ಭಾಗವಹಿಸುವುದಿಲ್ಲವೆಂದರೂ ಆಮೇಲೆ ಇತರ ವಿರೋಧಪಕ್ಷಗಳ ಒತ್ತಾಯದ ಮೇರೆಗೆ ಭಾಗವಹಿಸಿದವು. ಶ್ರೀನಗರ ಸಮ್ಮೇಳನದಲ್ಲೂ ಬಿ.ಜೆ.ಪಿ. ಭಾಗವಹಿಸಲಿಲ್ಲ. ಈ ಮಧ್ಯೆ ಆ ಪಕ್ಷದೊಡನೆ ಕೂಟ ರಚಿಸಿಕೊಂಡ ಲೋಕದಳವೂ ಭಾಗವಹಿಸಲಿಲ್ಲ. ಅದಕ್ಕೆ ಅವರು ಕೊಟ್ಟ ನೆಪವೆಂದರೆ ಆಹ್ವಾನ ತಡವಾಗಿ ಬಂತು ಎಂದು. ಆದರೆ ಆಹ್ವಾನ ಬೇಗನೇ ತಲುಪಿದ್ದರೂ ಅವರು ಭಾಗವಹಿಸುತ್ತಿರಲಿಲ್ಲ. ಏಕೆಂದರೆ ಸಮ್ಮೇಳನದ ಚರ್ಚೆಯ ವಿಷಯ (ಕೇಂದ್ರ-ರಾಜ್ಯ ಸಂಬಂಧಗಳು) ಹಾಗೂ ಸ್ಥಳವನ್ನು ಬದಲಿಸಬೇಕೆಂಬುದು ಅವರ ಬೇಡಿಕೆಯಾಗಿತ್ತು. ಇದು ಮಿತಿಮೀರಿದ ಬೇಡಿಕೆಯೆಂದು ಇ.ಎಂ.ಎಸ್. ಹೇಳಿದ್ದಾರೆ.

ಶ್ರೀನಗರದ ಸಮ್ಮೇಳನದಲ್ಲಿ ಜನತಾ ಪಕ್ಷ ಸಕ್ರಿಯ ಪಾತ್ರವಹಿಸಿತು. ಮಾತ್ರವಲ್ಲ, ಮೊದಲ ಬಾರಿಗೆ ಡಿ.ಎಂ.ಕೆ. ಪಕ್ಷವೂ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿತು. ಅಲ್ಲದೆ ಶ್ರೀನಗರ ಸಮ್ಮೇಳನದಲ್ಲಿ ಭಾಗವಹಿಸಿದ ಪಕ್ಷಗಳು ಸಮ್ಮೇಳನದ ಚರ್ಚೆಗಳನ್ನು ಕುರಿತು ಬಹಳಷ್ಟು ಪೂರ್ವ ತಯಾರಿ ನಡೆಸಿಯೇ ಬಂದಿದುದರಿಂದ ಸಮ್ಮೇಳನದಲ್ಲಿ ಚರ್ಚೆ ತುಂಬಾ ಫಲದಾಯಕವಾಗಿ ಚೊಕ್ಕವಾಗಿ, ಸಮಯವನ್ನು ಹಾಳು ಮಾಡದೆ ನಡೆಯಿತು. ಆದ್ದರಿಂದ ಶ್ರೀನಗರದ ಸಮ್ಮೇಳನ ಇದುವರೆಗೆ ಅತ್ಯಂತ ಹೆಚ್ಚು ಪ್ರಾತಿನಿಧಿಕವಾದ ಹಾಗೂ ಹೆಚ್ಚು ಫಲದಾಯಕವಾದ ಸಮ್ಮೇಳನ ಎಂದು ಇ. ಎಂ. ಎಸ್. ವರ್ಣಿಸಿದ್ದಾರೆ.

ಶ್ರೀನಗರ ಸಮ್ಮೇಳನದ ಕೊನೆಯಲ್ಲಿ ಮುಂದಿನ ಸಮ್ಮೇಳನವನ್ನು ಕಲಕತ್ತೆಯಲ್ಲಿ ನಡೆಸಲು ನಿರ್ಧರಿಸಲಾಯಿತು. ರಾಷ್ಟ್ರೀಯ ಮಹತ್ವದ ಯಾವುದಾದರೊಂದು ಪ್ರಶ್ನೆಯ ಮೇಲೆ (ಉದಾ : ಚುನಾವಣಾ ಪದ್ಧತಿ ಸುಧಾರಣೆ) ಈ ಸಮ್ಮೇಳನ ನಡೆಯುವುದು. ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ತಲುಪಿದ ಒಮ್ಮತವನ್ನು ಈ ವಿಷಯದ ಮೇಲೂ ತಲುಪುವಂತಾದರೆ ಕಾಂಗ್ರೆಸ್ (ಐ) ವಿರುದ್ಧ ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಗೆ ಇನ್ನೊಂದು ಅಮೂಲ್ಯ ಕೊಡುಗೆಯಾಗುವುದೆಂದು ಇ. ಎಂ. ಎಸ್. ನಂಬೂದ್ರಿಪಾದ್‌ರವರ ನಿರೀಕ್ಷೆ.

ಶ್ರೀನಗರ ಸಮ್ಮೇಳನ ಅಂಗೀಕರಿಸಿದ ಠರಾವು ದೇಶಾದ್ಯಂತ ಈ ಬಗ್ಗೆ ವಿವೇಚನಾಪೂರ್ಣ ಚರ್ಚೆ ನಡೆದು ಸರ್ಕಾರಿಯಾ ಆಯೋಗ ತನಗೆ ವಹಿಸಿಕೊಟ್ಟ ವಿಷಯಗಳ ಬಗ್ಗೆ ತೀರ್ಮಾನಗಳಿಗೆ ಬರಲು ಆಧಾರವಾಗಬೇಕು ಹಾಗೂ ಅದು ಅಂತಿಮವಾಗಿ ಕೇಂದ್ರ-ರಾಜ್ಯಗಳ ನಡುವೆ ಆರೋಗ್ಯ ಸಂಬಧಗಳನ್ನು ಏರ್ಪಡಿಸಲು ಅಗತ್ಯವಾದ ಸಂವೈಧಾನಿಕ ತಿದ್ದುಪಡಿಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಆಶಿಸಲಾಗಿದೆ. ಆದರೆ ಕಾಂಗ್ರೆಸ್ (ಐ) ನಾಯಕರು ಶ್ರೀನಗರ ಸಮ್ಮೇಳನದ ಸಲಹೆಗಳ ಬಗ್ಗೆ ಅಡ್ಡಮಾತುಗಳನ್ನು ಆಡಿರುವುದು ಆಶ್ಚರ್ಯಕರ, ಇದರರ್ಥ ಅವರ ಸರಕಾರವೇ ಆಯೋಗವೊಂದನ್ನು ನೇಮಿಸಬೇಕಾಗಿಬಂದ ವಿಷಯದಲ್ಲಿ ಈ ನಾಯಕರಿಗೆ ಯಾವ ಮಹತ್ವವೂ ಕಾಣುವುದಿಲ್ಲವೇ ? ವಿರೋಧ ಪಕ್ಷಗಳೆತ್ತಿರುವ ಅಂಶಗಳ ಬಗ್ಗೆ ತಮ್ಮದೇ ಆದ ತರ್ಕಪೂರ್ಣ ಉತ್ತರಗಳನ್ನು ಕೊಡುವ ಸಾಮರ್ಥ್ಯ ಕೂಡ ಅವರಲ್ಲಿ ಇಲ್ಲವೇ ಎಂದು ಕಾಂ. ನಂಬೂದ್ರಿಪಾದ್ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

ಪತ್ರಿಕೋದ್ಯಮಿಗಳಲ್ಲಿ ಈ ಸಮ್ಮೇಳನಗಳನ್ನು ಕುರಿತಂತೆ ಹರಡಿರುವ ಊಹಾಪೋಹಗಳ ಬಗ್ಗೆ ಹೇಳುತ್ತ ಈ ಜನರ ಊಹಾಶಕ್ತಿಯ ಫಲವತ್ತತೆಯ ಬಗ್ಗೆ ಆಶ್ಚರ್ಯವಾಗುವುದೆಂದು ಇ. ಎಂ. ಎಸ್. ಟೀಕಿಸಿದ್ದಾರೆ. "ರಾಷ್ಟ್ರೀಯ" ಹಾಗೂ "ಪ್ರಾದೇಶಿಕ" ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿವೆ ಎಂದು ಊಹಾಪೋಹ ನಡೆಯಿತು. ಆದರೆ ಸಮ್ಮೇಳದ ಠರಾವಿನಲ್ಲಿ ಕಂಡು ಬರುವ ವ್ಯಾಪಕ ಒಮ್ಮತವನ್ನು ನೋಡಿದಾಗ ಇವರ "ಸಿದ್ಧಾಂತ"ಗಳ ಬುಡವೇ ಕುಸಿದು ಬಿದ್ದಿದೆ ಎಂದು ಅವರು ಹೇಳಿದ್ದಾರೆ. ಪತ್ರಿಕಾರಂಗದ ಇನ್ನು ಕೆಲವರು ಈ ಸಮ್ಮೇಳನಗಳು ಕಾಂಗ್ರೆಸ್ (ಐ) ಗೆ ಚುನಾವಣಾ ಪರ್ಯಾಯ ರಚಿಸುವ ಪ್ರಯತ್ನಗಳೆಂದು ಭಾವಿಸುತ್ತಿದ್ದಾರೆ. ಆದರೆ ಚುನಾವಣಾ ಹೋರಾಟಗಳೊಂದಿಗೆ ನೇರ ಸಂಬಂಧವಿಲ್ಲದ ರಾಷ್ಟ್ರೀಯ ಮಹತ್ವದ ಪ್ರಶ್ನೆಗಳ ಬಗ್ಗೆ ವಿಚಾರ ವಿನಿಮಯ ಕೂಡ ಮಹತ್ವಪೂರ್ಣ ಎಂದು ಇ. ಎಂ. ಎಸ್. ಅಭಿಪ್ರಾಯಪಟ್ಟಿದ್ದಾರೆ. —

ಹೂವಿನ ಹಡಗಲಿ

ಭೂಮಿಗಾಗಿ ಮೆರವಣಿಗೆ

ಬಳ್ಳಾರಿಯ ಹಡಗಲಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಭೂಮಿಗಾಗಿ ಹೋರಾಟದ ಅಂಗವಾಗಿ ದಿನಾಂಕ 19-10-83 ರಂದು ಲಂಬಾಣಿಯವರ 3 ತಂಡಗಳಿಂದ ಸುಮಾರು 400 ರೈತರನ್ನೊಳಗೊಂಡ ಮೆರವಣಿಗೆ ಹಡಗಲಿಯಲ್ಲಿ ನಡೆಯಿತು. ನಂತರ ಕರ್ನಾಟಕದ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ವಿ. ಎನ್. ಹಳಕಟ್ಟಿಯವರು ಸಭೆಯನ್ನುದ್ದೇಶಿಸಿ ಭೂಮಿಗಾಗಿ ನಡೆಯುತ್ತಿರುವ ಹೋರಾಟವನ್ನು ಅತ್ಯಂತ ಬಲಯುತವಾಗಿ ಮುಂದುವರೆಸುವುದಾಗಿ ತಿಳಿಸಿದರು. ಹಡಗಲಿ ತಾಲ್ಲೂಕಿನ ಪ್ರಾಂತ ಸಂಘದ ಕಾರ್ಯದರ್ಶಿ ಪಿ. ಆರ್. ವೆಂಕಟೇಶ್ ಮಾತನಾಡಿದರು. ಹರಿಹರ ಬೀಡಿ ಕಾರ್ಮಿಕರ ಸಂಘದ ಮದರ್‌ಸಾಬ್‌ರವರು ಭೂಮಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಬೀಡಿ ಕಾರ್ಮಿಕರ ಬೆಂಬಲವಿರುವುದಾಗಿ ತಿಳಿಸಿದರು. ಹೋರಾಟಕ್ಕೆ ಬೆಂಬಲವಾಗಿ ಎಸ್. ಎಫ್. ಐ. ನ ಕಾರ್ಯದರ್ಶಿ ಎಸ್. ವೈ. ಗುರುಶಾಂತತಪ್ಪ ಮತ್ತು ಭೂಮಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಮಹಿಳೆಯ ಪಾತ್ರದ ಕುರಿತು ಶಾಂತಕುಮಾರಿ ಮಾತನಾಡಿದರು; ಡಿ.ವೈ.ಎಫ್.ಐ.ನ ರಾಜ್ಯ ಸಂಚಾಲಕರಾದ ಶಿವರಾಂರವರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ನಂತರ ಪೂರೆನಾಯಕ್ ಸ್ವಾಗತವನ್ನು ಬಯಸಿ, ಹರಪನಹಳ್ಳಿ ಪ್ರಾಂತರೈತ ಸಂಘದ ಸಂಚಾಲಕರಾದ ಪರುಶರಾಮ ಮಾತನಾಡಿದರು. ಕೊನೆಯಲ್ಲಿ ಕೆ. ವಿ. ಪಾಟೀಲ್ ವಂದನಾರ್ಪಣೆ ಮಾಡಿದರು.

* * *

ಕುಂದಾಪುರ

ಡಿ.ವೈ.ಎಫ್.ಐ. ನಿಂದ ಶ್ರಮದಾನ

ಡಿ. ವೈ. ಎಫ್. ಐ. ಕೋಣಿ ಘಟಕದ ನೇತೃತ್ವದಲ್ಲಿ ತಾ॥ 9-10-83 ರಂದು ಕೋಣಿ ಗ್ರಾಮದ ಎಚ್. ಎಂ. ಟಿ. ರಸ್ತೆಯ ದುರಸ್ತಿಯ ಕೆಲಸವನ್ನು ಸಂಘದ ಸದಸ್ಯರು ನಿರ್ವಹಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಊರಿನ ಹಿರಿಯ ಮುಂದಾಳು ಶ್ರೀ ಮೋತಿ ಡಿಸೋಜ ರವರು ಉದ್ಘಾಟಿಸಿದರು. ಮಳೆಯಿಂದ ಕೊಚ್ಚಿಕೊಂಡುಹೋಗಿದ್ದ ರಸ್ತೆಯನ್ನು ಶ್ರಮದಾನದ ಮೂಲಕ ದುರಸ್ತಿ ಮಾಡಿದ ಯುವಜನರ ಕೆಲಸವು ಊರಿನ ಜನರಿಂದ ಮೆಚ್ಚಿಗೆ ಪಡೆಯಿತು.

ಶ್ರಮದಾನ ತಂಡದ ನೇತೃತ್ವವನ್ನು ಯುವಜನ ಫೇಡರೇಶನ್ನಿನ ಅಧ್ಯಕ್ಷರಾದ ಶ್ರೀ ಕೆ. ಎನ್. ಸಂಜಯ್ ಮತ್ತು ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಆಚಾರ್ ವಹಿಸಿದ್ದರು.

ಮೈಸೂರು

ಎಂ. ಎಂ. ಸಿ. ಕಾರ್ಖಾನೆಯಲ್ಲಿ ಹೊಸ ಸಂಘ ಅಸ್ತಿತ್ವಕ್ಕೆ

ಮಹೇಂದ್ರ ಅಂಡ್ ಮಹೇಂದ್ರ ಗುಂಪಿನ ಎಂ.ಎಂ.ಸಿ. ಯಂತ್ರ ತಯಾರಿಕಾಘಟಕ ಮೈಸೂರಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಉತ್ಪಾದನೆಯಲ್ಲಿ ತೊಡಗಿದೆ. ಇಲ್ಲಿ 300-400 ಕಾರ್ಮಿಕರು ದುಡಿಯುತ್ತಿದ್ದು ಆಡಳಿತ ವರ್ಗದಿಂದ ಹಲವು ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಈ ಅನ್ಯಾಯವನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗದಂತೆ ಆಡಳಿತ ವರ್ಗ ತನ್ನ ಚಮಚಾ ಸಂಘವೊಂದನ್ನು ಕಾರ್ಮಿಕರ ಮೇಲೆ ಹೇರಿದೆ. ತರಬೇತಿ ಹೆಸರಿನಲ್ಲಿ ಹೆಚ್ಚುವರಿ ಕೆಲಸ ಮಾಡಿಸುವ ಮತ್ತು ಇತರ ಹಲವು ಅವ್ಯವಹಾರಗಳ ವಿರುದ್ಧ ಪ್ರತಿಭಟಿಸಿದವರನ್ನು ಬಲವಾಗಿ ವಜಾ ಮಾಡಲಾಗಿದೆ. ಇದರ ವಿರುದ್ಧ ಕಾರ್ಮಿಕ ಸಂಘಟನೆಗೆ ಪ್ರಯತ್ನಿಸುತ್ತಿದ್ದ ಎಚ್. ಎಸ್. ಕೃಷ್ಣರವರನ್ನು ತಕ್ಷಣ ವಜಾ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 27ರಂದು ಕಾರ್ಮಿಕರ ಸರ್ವಸದಸ್ಯರ ಸಭೆಯು ನಡೆದು ಮೈಸೂರು ಜಿಲ್ಲಾ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ಆರ್, ಮೋಹನ್ ಕುಮಾರರ ಅಧ್ಯಕ್ಷತೆಯಲ್ಲಿ ಎಂ.ಎಂ.ಸಿ. ಎಂಪ್ಲಾಯಿಸ್ ಅಸೋಸಿಯೇಶನ್ ಎಂಬ ಹೊಸ ಸಂಘವನ್ನು ಸ್ಥಾಪಿಸಲಾಯಿತು. ಶಾಸಕ ಕಾ॥ ಸೂರ್ಯನಾರಾಯಣ ರಾವ್ ಇದರ ಗೌರವ ಅಧ್ಯಕ್ಷರು. ಕಾಂ ಎನ್. ಮೋಹನ್ ಕುಮಾರ್ ಪ್ರಧಾನ ಕಾರ್ಯದರ್ಶಿಗಳಾಗಿ, ಕಾಂ. ಆನಂದ್ ಕುಮಾರ್ ಲಾರೆನ್ಸ್ ಉಪಾಧ್ಯಕ್ಷರಾಗಿ, ಕಾಂ. ಎಚ್. ಎಸ್. ಕೃಷ್ಣ ಮತ್ತು ಧನರಾಜ್ ಸಹಕಾರ್ಯದರ್ಶಿಗಳಾಗಿ ಮತ್ತು ಕಾಂ. ಸುರೇಶ್ ಕುಮಾರ್ ಖಜಾಂಚಿಗಳಾಗಿ ಆಯ್ಕೆಯಾದರು, ಸಭೆಯಲ್ಲಿ ಕಾರ್ಮಿಕರ ವಿವಿಧ ಸಮಸ್ಯೆಗಳನ್ನು ಚರ್ಚಿಸಲಾಯಿತು.

ರಾಜ್ಯೋತ್ಸವದಂದು ಸುಮಾರು 200 ಎಂ. ಎಂ. ಸಿ. ಕಾರ್ಮಿಕರು ಅರಮನೆಯೊಳಗೆ ಮತಪ್ರದರ್ಶನ ನಡೆಸಿದರು. ಅರಮನೆಯ ಮುಂದುಗಡೆ ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು. ನಂತರ ಕಾರ್ಮಿಕರು ಕಾರ್ಮಿಕ ಮಂತ್ರಿಗಳ ಮನೆಯವರೆಗೆ ಮೆರವಣಿಗೆ ನಡೆಸಿ ಮಂತ್ರಿಗಳಿಗೆ ಮನವಿ ಪತ್ರವೊಂದನ್ನು ಅರ್ಪಿಸಿದರು.

ಡಿವೈಎಫ್ಐ ನಿಂದ ರಾಜ್ಯೋತ್ಸವ

ಮೈಸೂರಿನ ಡಿ. ವೈ. ಎಫ್. ಐ. ಘಟಕವು 1-11-83 ರಿಂದ ರಾಜ್ಯೋತ್ಸವದ ಪ್ರಯುಕ್ತ ಪಡುವಾರಹಳ್ಳಿಯಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಸಭೆಯಲ್ಲಿ ಶ್ರೀ ಎಲ್. ಶ್ರೀಕಂಠಯ್ಯ, ಕಾಂ. ಉಗ್ರಪ್ಪನವರು, ಕಾಂ. ಮೋಹನ್ ಕುಮಾರ್ ಮತ್ತು ಡಿ.ವೈ.ಎಫ್.ಐ. ಕಾರ್ಯದರ್ಶಿ ಜಯರಾಮ್, ಎಸ್. ಎಫ್.ಐ. ನ ಜಯಕುಮಾರ್ ಮಾತನಾಡಿದರು. ಕೊನೆಯಲ್ಲಿ ಮೈಸೂರು ಸಮುದಾಯ ತಂಡದವರಿಂದ ಒಂದು ಬೀದಿ ನಾಟಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಪಶ್ಚಿಮ ಬಂಗಾಳ

ಒಂದು ದುರುದ್ದೇಶಪೂರ್ಣ ಮತ್ತು ಅನೈತಿಕ ಚಳುವಳಿಯ ಕುರಿತು

ಕಲಕತ್ತೆಯ ಬಿ. ಸಿ. ರಾಯ್ ಮಕ್ಕಳ ಆಸ್ಪತ್ರೆ. ಎಲ್ಲಿ ನೋಡಿದರೂ ಮರಣಾಂತಿಕ ನೋವಿನಿಂದ ನರಳುವ ಮಕ್ಕಳು. ಏಳುದಿನಗಳಿಂದ ಹಿಡಿದು ಒಂದು ವರ್ಷದ ವರೆಗಿನ ವಯಸ್ಸಿನ ಹಸುಳೆಗಳು. ಕೆಲವು ಮಕ್ಕಳ ಮೂಗಿನಲ್ಲಿ ಆಕ್ಸಿಜನ್ ಟ್ಯೂಬ್‌ಗಳು. ಇನ್ನು ಕೆಲವು ತಡೆತಡೆದು ಉಸಿರೆಳೆಯುತ್ತಿರುವ ಹಸುಳೆಗಳು. ಆದರೆ ಇವುಗಳನ್ನು ನೋಡಿಕೊಳ್ಳಬೇಕಾಗಿದ್ದ ಡಾಕ್ಟರುಗಳು ಅವನ್ನು ಸಾವಿನ ದವಡೆಗೆ ತಳ್ಳಿ ಹೋಗಿದ್ದಾರೆ. ಸಮೀರನ್ ಒಂದು ಮಗುವಿಗೆ ಹೆಸರು ಅದಂ ತನ್ನ ಕೊನೆಯ ಕ್ಷಣಗಳನ್ನು ಎಣಿಸುತ್ತಿದೆ. ಸುತ್ತ ತಂದೆ–ತಾಯಿ ಬಂಧುಗಳು ತಲೆಯಮೇಲೆ ಕೈಹೊತ್ತು ಕೂತಿದ್ದಾರೆ. ಸಮೀರನನ್ನು ಬದುಕಿಸಬೇಕಾಗಿದ್ದ ಡಾಕ್ಟರುಗಳು ನಾಪತ್ತೆ. ಆಗಾಗ ಮೂರ್ಛೆ ಹೋಗುತ್ತಿರುವ ದೀಪು ಮಂಡಲ್ ಇನ್ನೊಂದು ಹಸುಳೆ. ತಾಯಿಯ ತೊಡೆಯ ಮೇಲೆ ಮಲಗಿದೆ. ನರ್ಸುಗಳು ಏನು ಮಾಡಬೇಕೆಂದು ತೋಚದೆ ಕಣ್ಣುಬಿಡುತ್ತಿದ್ದಾರೆ. ಯಾಕೆಂದರೆ ಯಾವ ಡಾಕ್ಟರನ ಸುಳಿವೂ ಇಲ್ಲ. ಇನ್ನೊಂದು ಒಂದು ವರ್ಷದ ಮಗು ರಾಜು. ನೋವಿನಿಂದ ಉರುಳಾಡುತ್ತಿದೆ........

........ಹೀಗೆ ಒಟ್ಟು ಸುಮಾರು 250 ನಿಸ್ಸಾಯಕ ಮಕ್ಕಳನ್ನು ಅವರಷ್ಟಕ್ಕೇ ಡಾಕ್ಟರುಗಳು ಬಿಟ್ಟುಹೋಗಿದ್ದಾರೆ........... ಆರು ಮಕ್ಕಳು ಶೋಚನೀಯ ಸಾವು ಕಂಡಿವೆ. ಕಲಕತ್ತೆಯ ಇತರ ಸರಕಾರಿ ಆಸ್ಪತ್ರೆಗಳಲ್ಲಿ ಇದೇ ಕಥೆ. ಕಾರಣ ಕಿರಿಯ ವೈದ್ಯರ ಚಳುವಳಿ. ಎಮರ್ಜೆನ್ಸಿ ವಾರ್ಡುಗಳು ಕೆಲಸಮಾಡುತ್ತಿಲ್ಲವಾದ್ದರಿಂದ ಆಸ್ಪತ್ರೆಯ ಮೆಟ್ಟಿಲುಗಳಲ್ಲೇ ರೋಗಿಗಳು ಅಸುನೀಗಿದ್ದಾರೆ. ಇದಕ್ಕೆ ಚಳುವಳಿಗಾರ ವೈದ್ಯರ ಉದ್ಗಾರ-ರೋಗಿಗಳು ಹಾಗೇ ಸಾಯುವುದು! ಕೆಲವು ದಿನಗಳ ಹಿಂದೆ ಕಲಕತ್ತೆಯ ಸರಕಾರಿ ಆಸ್ಪತ್ರೆಗಳ ಸ್ಥಿತಿಯಿದು.

ಕೆಲವು ಆಸ್ಪತ್ರೆಗಳಲ್ಲಿ ಈರೀತಿ ಏಕದಂ ಅವ್ಯವಸ್ಥೆ ಉಂಟುಮಾಡಿದ್ದ ಜೂನಿಯರ್ ಡಾಕ್ಟರ್ಸ್ ಫೆಡರೇಶನ್ ನೇತೃತ್ವದಲ್ಲಿ ಕಿರಿಯ ವೈದ್ಯರ ಒಂದು ವಿಭಾಗ ಕೆಲವು ತಿಂಗಳುಗಳಿಂದ ನಡೆಸುತ್ತಿದ್ದ ಚಳುವಳಿ ಈಗ ಅಂತ್ಯ ಕಂಡಿದೆ. ಎಲ್ಲ ಜನ ವಿರೋಧಿ ಹಾಗೂ ದುರುದ್ದೇಶಪೂರ್ಣ ಚಳುವಳಿಗಳಂತೆ ತನ್ನ ದುಷ್ಟ ಉದ್ದೇಶವನ್ನು ಈಡೇರಿಸಿಕೊಳ್ಳಲಾಗದೆ ಸಹಜ ಸಾವನ್ನು ಈ ಚಳುವಳಿ ಅಪ್ಪಿದಂತಾಗಿದೆ. ಮಾತ್ರವಲ್ಲ ಬಹಳಷ್ಟು ವೈದ್ಯರು ಮತ್ತು ಪ್ರಜಾಸತ್ತಾತ್ಮಕ ಜನತೆಯ ನಡುವೆ ಇದರಿಂದಾಗಿ ಒಂದು ಅಭೂತಪೂರ್ವ ಐಕ್ಯತೆ ಮೂಡಿಬಂದಿದೆ. ಹಾದಿ ತಪ್ಪಿದ ಚಳುವಳಿಗಾರ ವೈದ್ಯರಿಗೆ ಇದು ತೀರಾ ಅನಿರೀಕ್ಷಿತ ಬೆಳವಣಿಗೆಯಾಗಿತ್ತು. ಅದರಿಂದಾಗಿಯೇ ಅವರು ತಮ್ಮ ಚಳುವಳಿಯನ್ನು ಕೊನೆಗೊಳಿಸಬೇಕಾಗಿ ಬಂತು.

ಬೇಡಿಕೆಗಳು ಏನು!

ಕಿರಿಯ ವೈದ್ಯರ ಒಂದು ವಿಭಾಗದ ಈ ಚಳುವಳಿ ತಮ್ಮ 14 ಅಂಶಗಳ ಬೇಡಿಕೆಗಳ ಈಡೇರಿಕೆಗಾಗಿ ಎಂದು ಹೇಳಲಾಗುತ್ತಿತ್ತು. ಈ ಬೇಡಿಕೆಗಳನ್ನು ವಿಶ್ಲೇಷಿಸುವ ಮೊದಲು ಒಂದು ವಿಷಯ ಗಮನಾರ್ಹ. ಪಶ್ಚಿಮ ಬಂಗಾಳದ ಎಡರಂಗ ಸರಕಾರ ಇತರ ಜನವಿಭಾಗಗಳಂತೆ ಕಿರಿಯ ವೈದ್ಯರ ಬದುಕಿನಲ್ಲೂ ಬಹಳಷ್ಟು ಪರಿವರ್ತನೆಗಳನ್ನು ತಂದಿದೆ. ಎಲ್ಲಾ ಸರಕಾರಿ ನೌಕರರಂತೆ ವೈದ್ಯರ ಆರ್ಥಿಕ ಸೌಲಭ್ಯಗಳನ್ನು ಪರಿಷ್ಕರಿಸಲಾಗಿದೆ. ಬ್ರಿಟಿಷರ ಕಾಲದ ಸೇವಾ ನಿಯಮಗಳನ್ನು ರದ್ದುಮಾಡಿ ಸಂಘಟನೆಯ ಹಕ್ಕುಗಳನ್ನು ನೀಡಲಾಗಿದೆ. ಹೀಗಿದ್ದರೂ ಈ ಕಿರಿಯ ವೈದ್ಯರು ಜನತೆಯ ವಿರುದ್ಧ ಮುಷ್ಕರ ಏಕೆ ಹೂಡಿದರು?

ಈ ಕಿರಿಯ ವೈದ್ಯರ ಪ್ರಮುಖ ಬೇಡಿಕೆಯೆಂದರೆ ವಿಶ್ವವಿದ್ಯಾಲಯಗಳಿಂದ ವೈದ್ಯಕೀಯ ಡಿಗ್ರಿ ಪಡೆದು ಬರುವ ಎಲ್ಲರಿಗೂ ಉದ್ಯೋಗ ನೀಡಬೇಕು ಎಂಬುದು. ಆದರೆ ಈ ಬೇಡಿಕೆ ಎಷ್ಟೊಂದು ಟೊಳ್ಳು ಎಂಬುದಕ್ಕೆ ಒಂದು ಉದಾಹರಣೆ–1976–77 ರಲ್ಲಿ ಸಾರ್ವಜನಿಕ ಸೇವಾ ಆಯೋಗದ ಶಿಫಾರಸಿನ ಮೇರೆಗೆ 1167 ವೈದ್ಯ ಪದವೀಧರರಿಗೆ ಉದ್ಯೋಗಕ್ಕೆ ಕರೆ ನೀಡಲಾಗಿತ್ತು. ಇವರಲ್ಲಿ ಕೇವಲ 550 ಮಂದಿ ಕೆಲಸಕ್ಕೆ ಸೇರಿದರು. 1978–79 ರಲ್ಲಿ 1136 ರಲ್ಲಿ ಕೇವಲ 602 ಮಂದಿ ಕೆಲಸದ ಆಹ್ವಾನವನ್ನು ಸ್ವೀಕರಿಸಿದರು. 1981–83 ರಲ್ಲಿ 2234 ವೈದ್ಯ ಪದವೀಧರರಿಗೆ ಕೆಲಸದ ಕರೆ ನೀಡಲಾಯಿತು. ಕೇವಲ 1083 ಕಿರಿಯ ಡಾಕ್ಟರುಗಳಷ್ಟೇ ಕೆಲಸದ ಕರೆಯನ್ನು ಸ್ವೀಕರಿಸಿದರು. ಅಂದರೆ ಆಯ್ಕೆಗೊಂಡವರಲ್ಲಿ ಕೇವಲ 40% ದಷ್ಟು ವೈದ್ಯ ಪಧವೀಧರರು ಮಾತ್ರ ಸರಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಾಗಿದ್ದಾರೆ.

ಇದು ಕಿರಿಯ ವೈದ್ಯರ ಈ ಬೇಡಿಕೆಯ ಒಂದು ಮಗ್ಗುಲಷ್ಟೇ. ಅವರ ಫೇಡರೇಶನ್‌ಗೆ ಈ ವಿಷಯ ಚೆನ್ನಾಗಿ ತಿಳಿದಿದೆ. ಇಷ್ಟೇ ಅಲ್ಲ ಇನ್ನೊಂದು ವಿಷಯವೂ ಅದಕ್ಕೆ ಚೆನ್ನಾಗಿ ತಿಳಿದಿದೆ. ಸದ್ಯದ ಸಾಮಾಜಿಕ–ಆರ್ಥಿಕ ವ್ಯವಸ್ಥೆಯಲ್ಲಿ ಆಸ್ಪತ್ರೆಯ ಅವಶ್ಯಕತೆಗಳು ಹಾಗೂ ನಿಜವಾಗಿ ಒದಗಿಸಿರುವ ಸೌಲಭ್ಯಗಳ ನಡುವೆ ಅಂತರ ಇದೆ ಎಂಬುದು ನಿಜ. ಅಲ್ಲದೆ ರಾಜ್ಯಗಳು ಆರ್ಥಿಕವಾಗಿ ಕೇಂದ್ರ ಸರಕಾರದ ಮೇಲೆ ಬಹಳಷ್ಟು ಅವಲಂಬಿಸಿರಬೇಕಾಗುತ್ತದೆ. ಕೇಂದ್ರ ಸರಕಾರ ಸಾರ್ವಜನಿಕ ಕಲ್ಯಾಣಕ್ಕಾಗಿ ಹೆಚ್ಚು ಧನ ಸಂಗ್ರಹಿಸಲು ನಿರಾಕರಿಸುತ್ತಿದೆ. ಮಾತ್ರವಲ್ಲ ಈಗಾಗಲೇ ನೀಡುತ್ತಿರುವ ಧನ ಸಹಾಯದಲ್ಲೂ ತೀವ್ರವಾಗಿ ಕಡಿತ ತರುತ್ತಿದೆ. ಹೀಗಿರುವಾಗ, ರಾಜ್ಯ ಸರಕಾರವೊಂದು ಎಲ್ಲಾ ವೈದ್ಯಕೀಯ ಪದವೀಧರರಿಗೆ ಉದ್ಯೋಗ ನೀಡುವ ಶಕ್ತಿ ಹೊಂದಿಲ್ಲ. ಈ ಬೇಡಿಕೆಯೇನಿದ್ದರೂ ಕೇಂದ್ರ ಸರಕಾರದ ಮುಂದಿಡಬೇಕೆಂಬುದು **ಈ ಕಿರಿಯ ವೈದ್ಯರಿಗೆ ತಿಳಿಯದೇನಲ್ಲ ಆದರೂ ಅವರು ಕೇಂದ್ರ ಸರಕಾರದ ಜವಾಬ್ದಾರಿಯ ಬಗ್ಗೆ ತಮ್ಮ ಚಳುವಳಿಯ ಸಮಯದಲ್ಲಿ ಚಕಾರವೆತ್ತುತ್ತಿಲ್ಲ ಎಂಬುದು ಗಮನಾರ್ಹಕವಲ್ಲವೆ?** ಹೀಗಿದ್ದರೂ ಮುಖ್ಯಮಂತ್ರಿ ಜ್ಯೋತಿಬಸುರವರು ವೈದ್ಯ ಪದವೀಧರರು ಹಳ್ಳಿಗಳಿಗೆ ಹೋಗಲು ತಯಾರಿದ್ದರೆ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಪದವೀಧರರಿಗೆ ಉದ್ಯೋಗ ಒದಗಿಸುವುದಾಗಿ ಭರವಸೆಯಿತ್ತರು. ಆದರೆ ಅನೈತಿಕ ಚಳುವಳಿಗಳಿಂದ ಕಿರಿಯ ವೈದ್ಯರು ಇದಕ್ಕೆ ಹೇಗೆ ತಾನೆ ತಯಾರಾದರು?

ವೇತನ ಪರಿಷ್ಕರಣದ ಬೇಡಿಕೆಯನ್ನು ಅದಾಗಲೇ ಎಡರಂಗ ಸರಕಾರ ಪೂರೈಸಿತ್ತು ಎಂದು ಹಿಂದೆ ಹೇಳಿದೆ. ವಾಸ್ತವವಾಗಿ **ಎಡರಂಗ ಸರಕಾರ ಎರಡುಬಾರಿ ಕಿರಿಯ ವೈದ್ಯರ ಸ್ಟೈಪೆಂಡ್‌ಗಳನ್ನು ಹೆಚ್ಚಿಸಿದೆ. ಎಲ್ಲಾ ವೈದ್ಯಕೀಯ ಪದವೀಧರರಿಗೂ ಒಂದು ವರ್ಷಕಾಲ ಹೌಸ್‌ಸರ್ಜನ್ ಆಗಿರುವ ಅವಕಾಶ ನೀಡಿದೆ. ದೇಶದ ಬೇರೆಲ್ಲೂ ಈ ಸೌಲಭ್ಯವಿಲ್ಲ.** ಇತರ ವೈದ್ಯರ ವೇತನಗಳನ್ನೂ, ಸೌಲಭ್ಯಗಳನ್ನೂ, ಪರಿಷ್ಕರಿಸಲಾಗಿದೆ. ವೈದ್ಯರ ಸಂಖ್ಯೆಯನ್ನು 1976–77 ರಲ್ಲಿ 6100 ಜಡ್ಡರನ್ನು 1981–83 ರಲ್ಲಿ 7833 ಕ್ಕೇರಿಸಲಾಗಿದೆ.

ವಿದೇಶಿ ಔಷಧಿ ಕಂಪೆನಿಗಳ ಚೇಲಾಗಳೇ!

ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಬೇಕು. ಜೀವವುಳಿಸುವ ಔಷಧಿಗಳನ್ನು ಒದಗಿಸಬೇಕು. ಒಳರೋಗಿಗಳಿಗೆ ಒದಗಿಸುವ ಆಹಾರದ ಪ್ರಮಾಣ ಹೆಚ್ಚಿಸಬೇಕು ಇತ್ಯಾದಿ ಅವರ 14 ಬೇಡಿಕೆಗಳಲ್ಲಿ ಒಂದು. ಎಡರಂಗ ಸರಕಾರ ತನ್ನ ಸೀಮಿತ ಆರ್ಥಿಕಶಕ್ತಿಗನುಗುಣವಾಗಿ 1976 ರಲ್ಲಿ ಹಾಸಿಗೆಗಳ ಸಂಖ್ಯೆ 52624 ಇದ್ದದ್ದನ್ನು 1982–83ರಲ್ಲಿ 60821 ಕ್ಕೇರಿಸಿದ್ದೇ ಈವರ್ಷ ಮತ್ತೆ 1300 ಹಾಸಿಗೆಗಳನ್ನು ಸೇರಿಸಲಾಗುತ್ತಿದೆ. ಔಷಧಿಗಳಿಗೂ ಕೇವಲ 5 ಆಸ್ಪತ್ರೆಗಳಿಗೇ, 1976–77 ರಿಂದ 1982-83ರ ನಡುವೆ ಏಳು ಕೋಟಿ ರೂ.ಗಳಷ್ಟು ಹೆಚ್ಚು ಖರ್ಚು ಮಾಡಲಾಗಿದೆ. ಅಲ್ಲದೆ ಅಗತ್ಯವಿದ್ದಾಗ ಜೀವವುಳಿಸುವ ಔಷಧಿಗಳನ್ನು ಖರೀದಿಸಲು ಕೂಡಾ ಅನುಮತಿ ನೀಡಲಾಗಿದ್ದೇ ರೋಗಿಗಳಿಗೆ ಆಹಾರ ಪೂರೈಕೆಯ ಪ್ರಮಾಣವನ್ನು 1976 ರಿಂದ 1980ರ ನಡುವೆ 75% ಹೆಚ್ಚಿಸಲಾಗಿದೆ.

ಇಲ್ಲಿಯೂ ಹಿಂದೆ ಹೇಳಿದಂತೆ ಗಮನಿಸಬೇಕಾದ ಅಂಶವೆಂದರೆ ಸದ್ಯದ ವ್ಯವಸ್ಥೆಯಲ್ಲಿ, ನಮ್ಮ ರಾಜಕೀಯ ಚೌಕಟ್ಟಿನಲ್ಲಿ ರಾಜ್ಯಸರಕಾರ ಮಾಡಬಹುದಾದ ಕಾರ್ಯಗಳಿಗೆ ತೀವ್ರ ಮಿತಿಇದ್ದೇ ಇದು ಈಗ ಎಲ್ಲರಿಗೂ ವೇದ್ಯವಾಗಿರುವ ವಿಚಾರ. **ಭಾರತ ಸರಕಾರ ಆರೋಗ್ಯದ ಬಾಬ್ತು ಮೀಸಲಿಡುವ ಮೊತ್ತ ಯೋಜನೆಯಿಂದ ಯೋಜನೆಗೆ ಕಡಿಮೆಯಾಗುತ್ತ ಬಂದಿದ್ದೇ ಈಗ ಅದು ಯೋಜನೆಯ ಒಟ್ಟು ವೆಚ್ಚದ 1.8.%.ಕ್ಕಿಳಿದಿದೆ ಆದರೆ ಪಶ್ಚಿಮ ಬಂಗಾಳದ ಎಡರಂಗ ಸರಕಾರ ತನ್ನ ಬಜೆಟ್ಟಿನ 14%. ಆರೋಗ್ಯದ ಬಾಬ್ತು ಮೀಸಲಿಟ್ಟಿದೆ.** ಹಾಸಿಗೆಗಳ, ಔಷಧಿಗಳ ಮತ್ತು ಆಹಾರದ ಪ್ರಮಾಣ ಹೆಚ್ಚಿಸಬೇಕೆಂಬುದು ಕಿರಿಯ ವೈದ್ಯರ ಪ್ರಮಾಣಿಕ ಬೇಡಿಕೆಯಾಗಿದ್ದರೆ ಅವರು ನಿಜವಾಗಿ ಕೇಂದ್ರ ಸರಕಾರದ ಈ ಧೋರಣೆಯ ವಿರುದ್ಧ ತಮ್ಮ ಪ್ರತಿಭಟನೆ ವ್ಯಕ್ತಪಡಿಸಬೇಕಿತ್ತು. ಆದರೆ ತಮ್ಮ ಚಳುವಳಿಯ ಅವಧಿಯಲ್ಲಿ ಎಂದೂ ಅವರು ಈ ಬಗ್ಗೆ ಚಕಾರವೆತ್ತಲಿಲ್ಲ.

ಇನ್ನೊಂದು ಕುತೂಹಲದ ವಿಷಯವಿದೆ. ಪ್ರತಿಯೊಂದು ಆಸ್ಪತ್ರೆಗೆ ಒದಗಿಸಬೇಕಾದ ಔಷಧಿಗಳ ಪಟ್ಟಿಯನ್ನು ಅವರ ಫೆಡರೇಶನ್ ಸಲ್ಲಿಸಿದೆ. ಅದರಲ್ಲಿ ಪ್ರತಿಯೊಂದೂ ಬಹು ರಾಷ್ಟ್ರೀಯ ಸಂಸ್ಥೆಗಳು ತಯಾರಿಸುವ ಔಷಧಿಗಳು. ದೇಶೀಯ ಕಂಪೆನಿಗಳ ಔಷಧಿಗಳು ಅವರ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ!

ಕೇವಲ ನೆಪ ಮಾತ್ರಕ್ಕೆ

ಹೀಗೆ ಕಿರಿಯ ವೈದ್ಯರ ಕೆಲವು ಬೇಡಿಕೆಗಳನ್ನು ಪೂರೈಸಲಾಗಿದ್ದು, ಉಳಿದವುಗಳನ್ನು ಆರೋಗ್ಯದ ಬಾಬ್ತಿಗೆ ತನ್ನ ವೆಚ್ಚದ ಅಂಶವನ್ನು ಕಡಿತಗೊಳಿಸುತ್ತ ಬಂದಿರುವ ಕೇಂದ್ರ ಸರಕಾರವನ್ನೇ ರಾಜ್ಯ ಸರಕಾರ ಅವಲಂಬಿಸಿರಬೇಕಾದ ಆರ್ಥಿಕ ಸನ್ನಿವೇಶದಲ್ಲಿ ಯಾವುದೇ ರಾಜ್ಯ ಸರಕಾರವೂ ಪೂರೈಸಲು ಸಾಧ್ಯವಿಲ್ಲದ್ದೂ ಎಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಆದರೆ ಕೇಂದ್ರ ಸರಕಾರದೆದುರು ತಮ್ಮ ಬೇಡಿಕೆಗಳನ್ನು ಮಂಡಿಸುವ ಬದಲು ಈ ಚಳುವಳಿಗಾರರು ಕೇಂದ್ರ ಸರಕಾರದ ಹಾಗೂ ಬಹುರಾಷ್ಟ್ರೀಯ ಔಷಧಿ ಸಂಸ್ಥೆಗಳ ಚೇಲಾಗಳಂತೆ ವರ್ತಿಸಿದರು. ಕಾರ್ಮಿಕ ಸಂಘಟನೆಯ ಹಾಗೂ ವೈದ್ಯಕೀಯ ನೀತಿಗಳನ್ನೆಲ್ಲ ಗಾಳಿಗೆ ತೂರಿ ಮಾತುಕತೆಗಳಿಗೆ ರಾಜ್ಯ ಸರಕಾರದ ಆಹ್ವಾನ ತಿರಸ್ಕರಿಸಿ ಆಸ್ಪತ್ರೆಗಳಲ್ಲಿ ಅವ್ಯವಸ್ಥೆ ತರಲು ಪ್ರಯತ್ನಿಸಿದರು. ವಾಸ್ತವವಾಗಿ ಈ ಚಳುವಳಿಯ ಉದ್ದೇಶ ಬೇರೆಯೇ ಆಗಿದ್ದು 14 ಅಂಶಗಳ ಬೇಡಿಕೆಗಳು ಕೇವಲ ನೆಪಮಾತ್ರಕ್ಕೆ ಎಂಬುದು ಚಳುವಳಿಯನ್ನು ಸರಿಯಾಗಿ ಪರಿಶೀಲಿಸಿದ ಯಾರಿಗಾದರೂ ಆರಂಭದಿಂದಲೇ ತಿಳಿಯುತ್ತಿತ್ತು. ಕೊನೆಗೆ ಎಡರಂಗ ಸರಕಾರ ರಾಜೀನಾಮೆ ಕೊಡಬೇಕೆಂಬ ಬೇಡಿಕೆ ಹೊಸದಾಗಿ ಸೇರಿದಾಗ ಈ ಚಳುವಳಿಯ ನಿಜ ಬಣ್ಣ ಬಯಲಾಯಿತು.

ಆರಂಭದಿಂದಲೂ ಕೆಲವು ಕಾಂಗ್ರೆಸ್ (ಐ). ನಕ್ಸಲೈಟರು ಈ ಚಳುವಳಿಯ ನೇತೃತ್ವದಲ್ಲಿದ್ದರು. ಕಾಂಗ್ರೆಸ್ (ಐ) ಎ.ಐ.ಸಿ.ಪಿ., ಎಸ್. ಯು. ಸಿ. ಐ. ನಕ್ಸಲೀಯರ ಮತ್ತು ಗುತ್ತೇದಾರಿ ಪತ್ರಿಕೆಗಳ ಸಂಪೂರ್ಣ ಬೆಂಬಲ ಕಿರಿಯ ವೈದ್ಯರ ಈ ವಿಭಾಗಕ್ಕಿತ್ತು. ಆದ್ದರಿಂದಲೇ ಇದೊಂದು ಜನವಿರೋಧಿ. ದುರುದ್ದೇಶಪೂರ್ಣ, ಅನೈತಿಕ ಚಳುವಳಿಯೆಂಬುದು ಸ್ವಲ್ಪ ಸಮಯದಲ್ಲೇ ಎಲ್ಲರಿಗೂ ಸ್ಪಷ್ಟವಾಗಲಾರಂಭಿಸಿತು.

ಇದನ್ನು ಸಾರ್ವಜನಿಕರು ಹಾಗೂ ವೈದ್ಯರಲ್ಲೇ ಹಲವರು ಅರಿಯತೊಡಗಿದಾಗ ಈ ಚಳುವಳಿಯ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಕ್ರೋಢೀಕರಣಗೊಳ್ಳಲಾರಂಭಿಸಿತು. ರಾಜ್ಯ ಆರೋಗ್ಯ ಸೇವೆಗಳ ಸಂಘ ಮೋಸಹೋಗಿ ಈ ಚಳುವಳಿಗೆ ಬೆಂಬಲ ನೀಡಿದ್ದರೂ ಕಲಕತ್ತೆ ಬಿಟ್ಟು ಉಳಿದೆಡೆ ಡಾಕ್ಟರುಗಳು ಈ ಮುಷ್ಕರವನ್ನು ಬೆಂಬಲಿಸಲು ನಿರಾಕರಿಸಿದರು. ಸಂಘದ ಅಧ್ಯಕ್ಷ ಡಾ॥ ಭಾಸ್ಕರ್‌ರಾಮ್ ಚೌಧುರಿ ಹಾಗೂ ಕಾರ್ಯಕಾರೀ ಸಮಿತಿಯ ಸದಸ್ಯರು ಕೆಲವರು ಮುಷ್ಕರವನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದರು. ವಿವಿಧ ಸಾಮೂಹಿಕ ಸಂಘಟನೆಗಳಿಗೆ ಸೇರಿದ ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು. ಆಸ್ಪತ್ರೆಗೆ ದಾಖಲಾಗಬೇಕಿದ್ದ ರೋಗಿಗಳ ಕುಟುಂಬಗಳೊಂದಿಗೆ ಆಸ್ಪತ್ರೆಗಳೆದುರು ಪ್ರತಿನಿಧಿ ಪ್ರದರ್ಶನ, ಧರಣಿ ನಡೆಸಿ ಮುಷ್ಕರ ನಿರತ ವೈದ್ಯರು ಕೆಲಸಕ್ಕೆ ಹಾಜರಾಗಬೇಕೆಂದು ಒತ್ತಾಯಿಸಲಾರಂಭಿಸಿದರು.

[6ನೇ ಪುಟ ನೋಡಿ]

ಹರಿಹರ

ಕಿರ್ಲೋಸ್ಕರ್ ಕಾರ್ಮಿಕರ ಮೇಲೆ ಹಲ್ಲೆ

ತಾ॥ 31-10-83 ರಂದು ಸಂಜೆ ಸುಮಾರು 4 ಘಂಟೆಗೆ ಹರಪನಹಳ್ಳಿಯ ರಸ್ತೆಯಲ್ಲಿ ಮೈಸೂರು ಕಿರ್ಲೋಸ್ಕರ್ ಕಾರ್ಮಿಕರ ಸಂಘದ ಕಾರ್ಯಕರ್ತರಾದ ಬಾಬುಜಾನ್ ಎನ್ನುವವರ ಮೇಲೆ ವ್ಯವಸ್ಥಿತ ರೀತಿಯಲ್ಲಿ ಸಿ.ಪಿ.ಐ. ಮುಖಂಡರು ಹಲ್ಲೆ ನಡೆಸಿದ್ದಾರೆ. ತಾ॥ 29 ರಂದು ನಡೆದ ಸಂಘದ ಚುನಾವಣೆಯಲ್ಲಿ ಸೋತು ಹತಾಶರಾಗಿ ಈ ರೀತಿ ಸಂಘದ ಕಾರ್ಯಕರ್ತರ ಮೇಲೆ ಗೂಂಡಾಗಿರಿ ನಡೆಸುತ್ತಿರುವುದನ್ನು ಸಂಘದ ಕಾರ್ಯದರ್ಶಿ ಖಂಡಿಸಿದ್ದಾರೆ, ಹಾಗೂ ಶ್ರೀ ರಾಮಚಂದ್ರ ಎನ್ನುವ ಮತ್ತೊಬ್ಬ ಕಾರ್ಯಕರ್ತರ ಮೇಲೆ ಅದೇ ದಿನ ಸಂಜೆ ದಾವಣಗೆರೆಯಲ್ಲಿ ಯಾವುದೇ ಕಾರಣ ಇಲ್ಲದೇ ಹಲ್ಲೇ ನಡೆಸಿದ್ದಾರೆ. ಈ ರೀತಿ ಗೂಂಡಾಗಿರಿಗೆ ಪ್ರಯತ್ನಿಸುತ್ತಾ, ಸಿ. ಪಿ. ಐ. ಮುಖಂಡರು ದಾವಣಗೆರೆಯ ರಾಜಕೀಯವನ್ನು ಹರಿಹರದಲ್ಲಿ ಬೆಳೆಸಲು ಪ್ರಯತ್ನಿಸುತ್ತಿರುವುದನ್ನು ಹರಿಹರದ ಕಾರ್ಮಿಕರು ಮತ್ತು ನಾಗರೀಕರು ಎಚ್ಚರಿಕೆಯಿಂದ ಗಮನಿಸಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಪಹಿಲ್ವಾನ್ ಬೀಡಿ ಕಾರ್ಮಿಕರು ಹೋರಾಟದ ಕಣದಲ್ಲಿ

ಪಹಿಲ್ವಾನ್ ಬೀಡಿ ಮಾಲೀಕರು ಕಳೆದ ಮೂರು ವರ್ಷಗಳಿಂದ ತಮ್ಮ ಮಜೂರರಿಗೆ ಹಲವು ರೀತಿಯ ಅನ್ಯಾಯಗಳನ್ನು ನಡೆಸುತ್ತಿದ್ದಾರೆ. ಮಂಗಳೂರಿನ ಡಿಪೋಕ್ಕೆ ಬೀಗ ಮುದ್ರೆ ಘೋಷಿಸಿ ಕಾರ್ಮಿಕರಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಎಲ್ಲಾ ಸೌಲಭ್ಯಗಳನ್ನು ವಂಚಿಸಿದ್ದಾರೆ. ಮಜೂರಿಯನ್ನು ಸಹ ಕೊಟ್ಟಿಲ್ಲ. ಇಷ್ಟೇ ಅಲ್ಲದ ಇದೇ ಮಾಲೀಕರು ಬೇರೊಂದು ಹೆಸರಿನಲ್ಲಿ ಹೊಸ ಉದ್ಯಮ ಆರಂಭಿಸಿ ಬೀಡಿ ಕಟ್ಟಿಸುತ್ತಿದ್ದಾರೆ. ಈ ಅನ್ಯಾಯ ವಂಚನೆಗಳ ವಿರುದ್ಧ ಹೋರಾಡಲು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವತಿಯಿಂದ ನಡೆದ ಪಹಿಲ್ವಾನ್ ಬೀಡಿ ಮಜೂರರ ಸಭೆಯಲ್ಲಿ ನಿರ್ಧರಿಸಲಾಯಿತು. ಈ ಮಾಲೀಕರ ಡಿಪೋ ಎದುರು ಚಳುವಳಿ ನಡೆಸಲು ತೀರ್ಮಾನಿಸಲಾಯಿತು.

ಕಾ. ಕೆ. ಎಸ್. ಶ್ರೀಯಾನ್ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕಾಂ. ಸಿ. ನಾರಾಯಣ ಹಾಗೂ ಕಾಂ. ಕೆ. ವಿಶ್ವನಾಥ ಅತಿಥಿಗಳಾಗಿ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಕಾಂ. ಬಾಬು ದೇವಾಡಿಗರು ಮಾಲೀಕರ ಅನ್ಯಾಯಗಳನ್ನು ಸಭೆಯಲ್ಲಿ ವಿವರಿಸಿದರು.

ಹೆಚ್. ಎಸ್. ಸಿ. ಎಲ್. ಕಾರ್ಮಿಕ ಸಂಘದ ನೂತನ ಪದಾಧಿಕಾರಿಗಳು

ಕುದುರೆಮುಖ ಎಚ್. ಎಸ್. ಸಿ. ಎಲ್. ಎಂಪ್ಲಾಯಿಸ್ ಅಸೋಸಿಯೇಷನ್‌ನ ವಾರ್ಷಿಕ ಮಹಾಸಭೆಯು ದಿ. 23-10-83 ರಂದು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ಸುಕುಮಾರ್‌ರವರು ವಹಿಸಿದ್ದರು ಮತ್ತು ಕಾ. ಎ.ಕೆ. ವಿಶ್ವನಾಥ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಇಂದಿನ ಸಭೆಯಲ್ಲಿ ಈ ಕೆಳಕಂಡವರನ್ನು ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಯಿತು.

ಪದಾಧಿಕಾರಿಗಳು :

ಅಧ್ಯಕ್ಷರು : ಎಸ್. ಎಲ್. ಹೀರೇಮಠ, ಉಪಾಧ್ಯಕ್ಷರು, ಹಾಲೇಶಪ್ಪ, ಪ್ರಧಾನ ಕಾರ್ಯದರ್ಶಿ ಟಿ. ತಿಪ್ಪೇಶ್, ಜಂಟಿ ಕಾರ್ಯದರ್ಶಿ ಕೆ. ಟಿ. ರಾಘವೇಂದ್ರ ಮತ್ತು ಎಂ. ಎನ್. ರುದ್ರಪ್ಪ, ಸಂಘಟನಾ ಕಾರ್ಯದರ್ಶಿ ವಿ. ರಾಜೇಂದ್ರನ್, ಖಜಾಂಚಿ ಎಂ. ಮೋಹನದಾಸಪ್ರಭು.

ಕಾರ್ಯಕಾರಿ ಸಮಿತಿ ಸದಸ್ಯರು :

ಲಕ್ಷ್ಮಣಗೌಡ, ಜಿ. ಟಿ. ಕ್ರಾಸ್ಟ, ಕೆ. ಎಂ. ಮಹೇಶ್ವರಪ್ಪ, ಮೂಟಿ ಬೆನ್ನೂರ್, ಎಸ್. ಕೃಷ್ಣ, ಜಿ. ಎಸ್. ರಾಘವೇಂದ್ರ, ಎಂ. ರಾಜನ್.

ಹೊಸಪೇಟೆ

ಡಿ ವೈ ಎಫ್ ಐ ನ ಸಾಂಸ್ಕೃತಿಕ ವಿಭಾಗದ ಉದ್ಘಾಟನೆ

ಕಾಂ॥ ಶರಣಪ್ಪ ಕಟ್ಟಿಯವರ ಕ್ರಾಂತಿಗೀತೆಯೊಂದಿಗೆ ದಿನಾಂಕ 2-11-83 ರಂದು ಹೊಸಪೇಟೆಯ ಉಕ್ಕಡಕೇರಿ ಗರಡಿಮನೆ ಆವರಣದಲ್ಲಿ ಡಿ.ವೈ.ಎಫ್.ಐ. ಸಾಂಸ್ಕೃತಿಕ ವಿಭಾಗದ ಉದ್ಘಾಟನೆಯನ್ನು ಕಾಂ. ತಾಯಪ್ಪನಾಯಕ ನೆರವೇರಿಸಿದರು. ನಂತರ ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕರಾದ ಕಾಂ. ಜಂಬಯ್ಯನಾಯಕ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹಿಂದಿನ ಡಿ.ವೈ.ಎಫ್.ಐ. ಹೋರಾಟಗಳನ್ನು ವಿವರಿಸಿ ಸಾಂಸ್ಕೃತಿಕ ವಿಭಾಗವು ಹೋರಾಟದ ಒಂದು ಅಂಗವಾಗಿದೆಯೆಂದು ಹೇಳುತ್ತಾ ಇಂದಿನ ಭ್ರಷ್ಟ ಅಸಮಾನತೆಯ ಸಮಾಜದ ಸ್ಥಿತಿಯನ್ನು ವಿವರಿಸಿ ಈ ಪರಿಸ್ಥಿತಿಯ ನಿವಾರಣೆಗೆ ವಿದ್ಯಾರ್ಥಿ-ಯುವಜನರಲ್ಲದೇ ರೈತ-ಕಾರ್ಮಿಕರ ಐಕ್ಯತೆಗೆ ಹಾಗೂ ನಿರಂತರ ಹೋರಾಟ ಅಗತ್ಯವೆಂದು ಹೇಳಿದರು.

ನಂತರ ಸಾಂಸ್ಕೃತಿಕ ವಿಭಾಗದಿಂದ ರೈತ-ಕಾರ್ಮಿಕರ ಸಮಸ್ಯೆ ಕುರಿತ "ಬದಲಾವಣೆ" ಎಂಬ ನಾಟಕವನ್ನು ಹಾಗೂ ಅಧಿಕಾರಶಾಹಿ ಮನೋಭಾವವನ್ನು ಪ್ರತಿಬಿಂಬಿಸುವ "ನಾಯಿ" ಎಂಬ ನಾಟಕವನ್ನು ಪ್ರದರ್ಶಿಸಲಾಯಿತು.

ಸುಂದತ್ತಾ ಕಾರ್ಮಿಕರಿಂದ ಮಂತ್ರಿಗಳಿಗೆ ಘೇರಾವೋ !

ಹುಬ್ಬಳ್ಳಿಯ ಸುಂದತ್ತಾ ಫ್ಯಾಕ್ಟರಿಯ ಲಾಕೌಟ್ ಈಗ ಆರನೇ ತಿಂಗಳಿನಲ್ಲಿ ಕಾಲಿಡುತ್ತಿದ್ದಂತೆ ಕಾರ್ಮಿಕರ ಹೋರಾಟ ತೀವ್ರಗೊಳ್ಳುತ್ತಿದೆ. ಆಡಳಿತ ವರ್ಗದ ದಮನ ಕ್ರಮಗಳನ್ನು ಸರಕಾರದ ಗಮನಕ್ಕೆ ತಂದಿದ್ದರೂ ಕೂಡ ಸರಕಾರ ತನ್ನ ವಿಳಂಬನೀತಿಯಿಂದಾಗಿ ತಾನು ಯಾರ ಪಕ್ಷಪಾತಿ ಎಂಬುದನ್ನು ತೋರಿಸಿಕೊಡುತ್ತಿದೆ. ಆದ್ದರಿಂದಲೇ ದಿ. 30-10-83 ರಂದು ಶ್ರೀ ಬೊಮ್ಮಾಯಿ ಮತ್ತು ಶ್ರೀ ರಘುಪತಿಯವರು ಹುಬ್ಬಳ್ಳಿಗೆ ಭೇಟಿಯತ್ತಾಗ ಸುಂದತ್ತಾ ಕಾರ್ಮಿಕರು ಮೆರವಣಿಗೆ ಹೊರಡಿಸಿ ನೆಹರೂ ಮೈದಾನದ ಬಳಿ ಇಬ್ಬರನ್ನೂ ಘೇರಾವೋ ಹಾಕಿದರು. ಸುಮಾರು ಇಪ್ಪತ್ತು ನಿಮಿಷಗಳವರೆಗೆ ನಡೆದ ಘೇರಾವೋನಲ್ಲಿ ಸಾಮಾನ್ಯ ಕಾರ್ಮಿಕರು ತಾವಾಗಿಯೇ ಮುಂದೆ ಬಂದು ಅತ್ಯಂತ ಕೋಪದಿಂದ ಶ್ರೀ ಬೊಮ್ಮಾಯಿಯವರಿಗೆ ವಿವಿಧ ರೀತಿಯಲ್ಲಿ ಸವಾಲು ಹಾಕಿ ಅವರ ವರ್ತನೆಯನ್ನು ಖಂಡಿಸಿದರು. ಯೂನಿಯನ್ನಿನ ಸಂಘಟನಾ ಕಾರ್ಯದರ್ಶಿ ಕಾ. ಸುಧೀಂದ್ರ ಅವರು ಸುಂದತ್ತಾ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಕ್ಟೋಬರ್ 26 ರಿಂದ ಸರತಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದು ದಿ. 7-11-83ರಿಂದ ಆಮರಣ ಉಪವಾಸ ಸತ್ಯಾಗ್ರಹ ನಡೆಸುವ ನಿರ್ಣಯ ತೆಗೆದುಕೊಂಡಿರುವುದಾಗಿ ಸಚಿವರಿಗೆ ತಿಳಿಸಿದರು. ಕಾರ್ಮಿಕ ಮಂತ್ರಿ ಶ್ರೀ ಅಜೀಜ ಶೇಠ ಹಾಗೂ ತಾವು ಒಂದು ವಾರದೊಳಗಾಗಿ ಹುಬ್ಬಳ್ಳಿಗೆ ಬಂದು ಸಮಸ್ಯೆ ಇತ್ಯರ್ಥಗೊಳಿಸಲು ಮಾತುಕತೆ ನಡೆಸುವುದಾಗಿ ಶ್ರೀ ಬೊಮ್ಮಾಯಿಯವರು ಭರವಸೆ ಕೊಟ್ಟನಂತರ ಘೇರಾವೋ ನಿಲ್ಲಿಸಲಾಯಿತು.

ದಿ. 25-10-83 ರಂದು ಸಿ.ಐ.ಟಿ. ಯು ನೇತೃತ್ವದ ಜಂಟಿ ಕ್ರಿಯಾ ಸಮಿತಿಯು ಕಾ. ಎ.ಜೆ.ಕೆ. ನಾಯರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹೋರಾಟವನ್ನು ತೀವ್ರಗೊಳಿಸುವುದರ ಕುರಿತು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡಿತು. ಸಭೆಯಲ್ಲಿ ಕಾ. ವ್ಹಿ.ಎನ್. ಹಳಕಟ್ಟಿ, ಕಾ. ಸದಾನಂದ ಕಾ. ಸುಧೀಂದ್ರ ಹಾಗೂ ಕಾ. ವ್ಹಿ. ಎಂ. ಪೂಜಾರ ಮಾತನಾಡಿದರು. ಈ ತೀರ್ಮಾನಗಳಂತೆ ದಿ.26-10-83 ರಿಂದ ತಹಶೀಲದಾರ ಕಛೇರಿ ಎದುರು ಸುಂದತ್ತಾ ಕಾರ್ಮಿಕರು ಸರತಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ದಿ. 31-10-83 ರಂದು ಅಸಿಸ್ಟೆಂಟ ಲೇಬರ ಕಮೀಶನರ ಅವರ ಕಛೇರಿಯೆದುರು ಪಿಕೆಟಿಂಗ ನಡೆಸಿ ಐದು ತಾಸುಗಳ ವರೆಗೆ ಅಲ್ಲಿ ಯಾರೂ ಕೆಲಸಕ್ಕೆ ಹೋಗದಂತೆ ಮಾಡಲಾಯಿತು. ದಿ. 2-11-83 ರಂದು ಮತ್ತೆ ಎರಡು ಗಂಟೆಗಳವರೆಗೆ ಪಿಕೆಟಿಂಗ್ ನಡೆಸಿ ಡೆಪ್ಯೂಟಿ ಸುಪರಿಂಟೆಂಡೆಂಟ ಆಫ್ ಪೋಲೀಸ ಅವರ ಮಧ್ಯಸ್ಥಿಕೆಯ ನಂತರ ಅದನ್ನು ಕೊನೆಗೊಳಿಸಲಾಯಿತು.

ಬೆಂಗಳೂರು:

ರಷ್ಯಾದ ಕ್ರಾಂತಿಯ ವಾರ್ಷಿಕೋತ್ಸವ

ದಿನಾಂಕ 7-11-83 ರಂದು ಸಂಜೆ ಕಬ್ಬನ್ ಪಾರ್ಕಿನ ಎನ್. ಜಿ. ಓ. ಸಭಾಂಗಣದಲ್ಲಿ ಅಕ್ಟೋಬರ್ ಮಹಾಕ್ರಾಂತಿಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾ॥ ಎಸ್. ಸೂರ್ಯನಾರಾಯಣರಾವ್, ಕಾ॥ ಅನಂತರಾಂ, ಕಾ॥ ಆರ್. ಶ್ರೀನಿವಾಸ್, ಕಾ॥ ಪಿ. ಕೆ. ಸುಬ್ರಮಣಿ ಮುಂತಾದವರು ಮಾತನಾಡಿದರು.

ಶಿಡ್ಲಘಟ್ಟ ಡಿ.ವೈ.ಎಫ್.ಐ. ಮೆರವಣಿಗೆ

ಶಿಡ್ಲಘಟ್ಟ ಟೌನಿನ ಪಿ.ಡಬ್ಲ್ಯೂ.ಡಿ. ಅಧಿಕಾರಿಗಳು ಪೆಟ್ಟಿಗೆ ಅಂಗಡಿಗಳನ್ನು ಮುಚ್ಚಲು ನೀಡಿದ್ದ ನೋಟೀಸನ್ನು ವಿರೋಧಿಸಿ ಅಲ್ಲಿನ ಡಿ.ವೈ.ಎಫ್.ಐ. ನ ಸಮಿತಿಯವರು 28-10-83 ರಂದು ಮೆರವಣಿಗೆ ತೆಗೆದಿದ್ದರು. ಸುಮಾರು 100 ಯುವಜನರು ಭಾಗವಹಿಸಿದ್ದ ಮೆರವಣಿಗೆಯು ಅಧಿಕಾರಿಗಳನ್ನು ಭೇಟಿಮಾಡಿ ಮನವಿಯನ್ನು ಅರ್ಪಿಸಿತು.

ಮೆರವಣಿಯ ನೇತೃತ್ವವಹಿಸಿದ್ದ ಕಾಂ॥ ಆರ್. ಮುನಿಯಪ್ಪ ಹಾಗೂ ಜೆ. ಎನ್. ಸೂರ್ಯಪ್ರಕಾಶ್ ಮತ್ತಿತರರು ರಾಜ್ಯದಲ್ಲಿ ನಿರುದ್ಯೋಗದ ಭೀಕರತೆಯ ಬಗ್ಗೆ ವಿವರಿಸಿ ಯುವಜನರು ಬೇರೆ ದಾರಿಯಿಲ್ಲದೆ ಪೆಟ್ಟಿಅಂಗಡಿಗಳನ್ನು ಪ್ರಾರಂಭಿಸಿ ಜೀವಿಸುತ್ತಿರುವರೆಂದು, ಮತ್ತು ರಾಜ್ಯದ ಅಭಿವೃದ್ಧಿಗೆ ಕಂಟಕಪ್ರಾಯವಾದ ಕಾಂಗ್ರೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ ಯುವಜನರು ಉದ್ಯೋಗಾವಕಾಶ ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ಹೇಳಿ ಮನವಿಯನ್ನು ಅರ್ಪಿಸಿದರು. ಮೆರವಣಿಗೆಗಾರರ ಅಹವಾಲನ್ನು ಆಲಿಸಿದ ಅಧಿಕಾರಿಗಳು ತಾವು ಹಿಂದೆ ನೀಡಿದ್ದ ನೋಟೀಸನ್ನು ಹಿಂತೆಗೆದುಕೊಂಡ ನಂತರ ಮೆರವಣಿಗೆಯು ಶಾಂತ ರೀತಿಯಲ್ಲಿ ಚದುರಿತು.

ಬೆಂಗಳೂರು

ಬೆಲೆ ಏರಿಕೆ ವಿರೋಧಿ ಪ್ರಚಾರ ಸಭೆಗಳು

ಸಿ. ಪಿ. ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಕರೆಯ ಮೇರೆಗೆ ವರ್ತೂರು ವಿಧಾನ ಸಭಾ ಕ್ಷೇತ್ರದ ಕೆ. ಆರ್. ಪುರಂ ಪ್ರದೇಶದಲ್ಲಿ ಅಕ್ಟೋಬರ್ 26 ರಂದು ಎರಡು ಸಾರ್ವಜನಿಕ ಪ್ರಚಾರ ಸಭೆಗಳನ್ನು ನಡೆಸಲಾಯಿತು. ರಾಮಮೂರ್ತಿನಗರದಲ್ಲಿ ಸಾರ್ವಜನಿಕ ಸೇವಾ ಸಮಿತಿಯ ಆಶ್ರಯದಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು.

ಕೆ. ಆರ್. ಪುರಂ ಬಸ್ ನಿಲ್ದಾಣ ಮತ್ತು ರಾಮಮೂರ್ತಿ ನಗರದಲ್ಲಿ ನಡೆದ ಈ ಸಭೆಗಳಲ್ಲಿ ಭಾಗವಹಿಸಿದ್ದ ನೂರಾರು ಸಾರ್ವಜನಿಕರನ್ನು ಉದ್ದೇಶಿಸಿ ಸಿ.ಪಿ.ಐ. (ಎಂ) ಶಾಸಕ ಎಸ್. ಸೂರ್ಯನಾರಾಯಣರಾವ್ ಹಾಗೂ ಜಿಲ್ಲಾ ಸಮಿತಿಯ ಮುಖಂಡರಾದ ಕಾಮ್ರೇಡ್ ಟಿ. ಎಸ್. ಅನಂತರಾಂ. ನಾರಾಯಣರಾವ್ ಭಾನು, ಎಸ್. ಆರ್.ಆರಾಧ್ಯ ಮತ್ತು ರೈತ ಮುಖಂಡರಾದ ಶ್ಯಾಮಣ್ಣ ರಡ್ಡಿಯವರು ಮಾತನಾಡಿ ಬೆಲೆ ಏರಿಕೆ ಸಮಸ್ಯೆಯ ಬಗ್ಗೆ ವಿವರಿಸಿದರು.

ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಖಂಡಿಸಿ ರಾಜ್ಯ ಸರ್ಕಾರವು ಇತ್ತೀಚೆಗೆ ಘೋಷಿಸಿರುವ ಅಕ್ಕಿ, ಹಾಲು. ವಿದ್ಯುತ್ ಮತ್ತು ಬಸ್ ದರಗಳ ಏರಿಕೆ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಕೇಂದ್ರ ಸರ್ಕಾರದ ಜನವಿರೋಧಿ ಧೋರಣೆಯ ವಿರುದ್ಧ ರಾಜ್ಯದ ಜನತೆಯು ಹೋರಾಡುವುದರೊಂದಿಗೆ ಬೆಲೆ ಏರಿಕೆಯನ್ನು ತಡೆಗಟ್ಟಲು ತನ್ನ ಮಿತಿಯಲ್ಲಿಯೇ ಅಗತ್ಯ ಕ್ರಮಗಳನ್ನ ಕೈಗೊಳ್ಳುವಂತೆ ರಾಜ್ಯಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಭಾಷಣಕಾರರು ಕರೆ ನೀಡಿದರು. —

[5ನೇ ಪುಟದಿಂದ]

ಡಾಕ್ಟರುಗಳು, ಲಾಯರುಗಳು, ಅಧ್ಯಾಪಕರು. ಕಲಾವಿದರು, ಇತ್ಯಾದಿ ಬುದ್ಧಿಜೀವಿಗಳ ಎಲ್ಲಾ ವಿಭಾಗಗಳ ಜನರ ಸಾರ್ವಜನಿಕ ಸಮಾವೇಶ ನಡೆದು ಕಿರಿಯ ವೈದ್ಯರ ಈ ದುರುದ್ದೇಶಪೂರ್ಣ ಚಳುವಳಿಯ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿ, ರೋಗಿಗಳ ವಿರುದ್ಧ ತಮ್ಮ ಮುಷ್ಕರವನ್ನು ನಿಲ್ಲಿಸಬೇಕೆಂದು ಅವರನ್ನು ಒತಾಯಿಸಲಾಯಿತು. ಪರಿಣಾಮವಾಗಿ ತಮ್ಮ ತಮ್ಮ ದಾರಿಯನ್ನು ಅರಿತು ಕೆಲಸಕ್ಕೆ ವಾಪಸ್ಸಾಗುವ ವೈದ್ಯರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ನಡೆಯಿತು. ಕ್ರಮೇಣ ಕಲಕತ್ತೆಯ ಎಲ್ಲಾ ಆಸ್ಪತ್ರೆಗಳಲ್ಲೂ ಜನತೆಯ ವಿರುದ್ಧ ನಡೆದ ಈ ಅನೈತಿಕ ಮುಷ್ಕರ ನಿಂತುಹೋಯಿತು. —

ಬೆಂಗಳೂರು

ಬೆಲೆ ಏರಿಕೆ ವಿರುದ್ಧ ಮೆರವಣಿಗೆ - ಧರಣಿ

ಜನತಾ ಸರ್ಕಾರವು ಇತ್ತೀಚೆಗೆ ಹಾಲಿನ ಬೆಲೆ ಹಾಗೂ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ದರ ಏರಿಸಿರುವುದನ್ನು ವಿರೋಧಿಸಿ 21-11-1983 ರಂದು ಸಿ.ಪಿ.ಐ, (ಎಂ,)ನ ಬೆಂಗಳೂರು ಜಿಲ್ಲಾ ಸಮಿತಿಯ ಮೆರವಣಿಗೆ ಹಾಗೂ ಧರಣಿ ಮುಷ್ಕರವನ್ನು ಏರ್ಪಡಿಸಿತ್ತು,

11-30 ಗಂಟೆಗೆ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಹೊರಟ ಮೆರವಣಿಗೆಯು ಮೈಸೂರು ಬ್ಯಾಂಕ್ ಚೌಕದ ಮೂಲಕ ಹಾದು ವಿಧಾನ ಸೌಧ ತಲುಪಿತು, ಮೆರವಣಿಗೆಯಲ್ಲಿ ಸುಮಾರು ಒಂದು ಸಾವಿರ ಮಂದಿ ಭಾಗವಹಿಸಿದ್ದರು, ಮೆರವಣಿಗೆಕಾರರು ಹಾಲಿನ ಬೆಲೆ, ಬಸ್ ದರ ಇಳಿಸಲು ಹಾಗೂ ಪಕ್ಷಾಂತರ ಮಾಡುವ ಶಾಸಕರನ್ನು ಧಿಕ್ಕರಿಸಿ ಘೋಷಣೆಗಳನ್ನು ಕೂಗಿದರು,

ವಿಧಾನ ಸೌಧದೆದುರು ಪ್ರಾರಂಭವಾದ ಧರಣಿ ಸತ್ಯಾಗ್ರಹ ಸಂಜೆ 5 ಗಂಟೆಯವರೆಗೂ ನಡೆಯಿತು, ಮಧ್ಯಾಹ್ನ 3 ಗಂಟೆಗೆ ಸಿಪಿಐ (ಎಂ) ಜಿಲ್ಲಾ ಸಮಿತಿ ಸದಸ್ಯರ ನಿಯೋಗವು ಸಿಪಿಐ (ಎಂ) ಶಾಸಕರಾದ ಕಾ, ಸೂರ್ಯನಾರಾಯಣರಾವ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿಯವರ ವಿಶೇಷ ಕಾರ್ಯದರ್ಶಿಯವರಿಗೆ ಮನವಿ ಪತ್ರ ನೀಡಿ ಹಾಲಿನ ಬೆಲೆ, ರಾಜ್ಯ ಸಾರಿಗೆ ಸಂಸ್ಥೆಯ ಬಸ್ ದರಗಳ ಏರಿಕೆಯನ್ನು ಪುನರ್ ವಿಮರ್ಶಿಸಬೇಕೆಂದು ಒತ್ತಾಯಿಸಿದರು. ಜನ ಸಾಮಾನ್ಯರು ಜನತಾ ಸರ್ಕಾರದ ಈ ಕ್ರಮಗಳಿಂದ ತೀವ್ರ ಅಸಮಾಧಾನಗೊಂಡಿರುವುದು ಸ್ಪಷ್ಟವಾಗಿದೆ. ಈ ಸಂದರ್ಭವನ್ನುಪಯೋಗಿಸಿಕೊಂಡು ಕಾಂಗ್ರೆಸ್‌ನವರು ಸರ್ಕಾರವನ್ನು ಉರುಳಿಸುವ ಪ್ರಯತ್ನ ಮುಂದುವರಿಸುವ ಸಾಧ್ಯತೆ ಇರುವುದರಿಂದ ಸರ್ಕಾರವು ಕೂಡಲೇ ಬೆಲೆ ಏರಿಕೆಯನ್ನು ಪುನರ್ವಿಮರ್ಶಿಸಿ ಜನಸಾಮಾನ್ಯರ ವಿಶ್ವಾಸಕ್ಕೆ ಪಾತ್ರವಾಗಬೇಕೆಂದು ಮನವಿಯಲ್ಲಿ ತಿಳಿಸಲಾಗಿದೆ.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ ಸೂರ್ಯನಾರಾಯಣರಾವ್, ಆರ್ ಶ್ರೀನಿವಾಸ್, ಪಿ. ಜಗನ್ನಾಥ್ ಮತ್ತು ಎಸ್.ಆರ್.ಆರಾಧ್ಯ ಅವರುಗಳು ಮಾತನಾಡಿದರು.

ಮೈಸೂರು ಕಾರ್ಪೊರೇಷನ್ ನೌಕರರ ಯಶಸ್ವಿ ಮುಷ್ಕರ

ಮೈಸೂರು ನಗರ ಕಾರ್ಪೊರೇಷನ್ ಪೌರ ಕಾರ್ಮಿಕರು ಕೆಲವಾರು ಮುಖ್ಯ ಬೇಡಿಕೆಗಳಿಗಾಗಿ ಕಳೆದ ಕೆಲವಾರು ವರ್ಷಗಳಿಂದ ಒತ್ತಾಯ ಪಡಿಸುತ್ತಿದ್ದಾಗ್ಯೂ ಕಾರ್ಪೊರೇಷನ್ ಆಡಳಿತ ವರ್ಗ ಅಪೇಕ್ಷಿಸಿದ ಕಾರಣ 29-10-1983 ರಂದು ಭಾರಿ ಪ್ರದರ್ಶನ ನಡೆಸಿ ತಮ್ಮ ಪ್ರತಿಭಟನೆ ವ್ಯಕ್ತಿಪಡಿಸಿದರು ಆದರೂ ಆಡಳಿತ ವರ್ಗ ಮಾತುಕತೆಗೆ ಬಾರದೆ ಇದ್ದಾಗ 31-10-1983 ರಂದು ಪೌರ ಕಾರ್ಮಿಕರು ಹಠಾತ್ ಮುಷ್ಕರ ನಡೆಸಿದರು. ಬೆದರಿದ ಆಡಳಿತ ವರ್ಗ ಮಾತುಕತೆಗೆ ಮುಂದಾದರು. ಈ ಕೆಳಗಿನ ಮುಖ್ಯ ಬೇಡಿಕೆಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಯಿತು.

(1) ಒಂದು ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸುತ್ತಾ ಇರುವವರನ್ನು ಖಾಯಂ ಮಾಡುವ ಬಗ್ಗೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಆದರ ತೀರ್ಮಾನವನ್ನು ಅನುಸರಿಸಿ ಮುಂದಿನ ಕ್ರಮವನ್ನು ತೆಗೆದು ಕೊಳ್ಳುವ ನಿರ್ಧಾರ ಇದರ ಪ್ರಕಾರ 100 ಕಾರ್ಮಿಕರನ್ನು ಹೆಚ್ಚಿಗೆ ತೆಗೆದು ಕೊಳ್ಳಲು ಒಪ್ಪಂದವಾಯಿತು.

(2) ಓ. ಓ. ಡಿ. ಕಾರ್ಮಿಕರನ್ನು ಆಯಾ ಸ್ಥಳದಲ್ಲೇ ಖಾಯಂ ಆಗಿ ಮುಂದುವರಿಸಲಾಗುತ್ತಿದೆ.

(3) ವೇತನ ಬಡ್ತಿಯನ್ನು ಕೂಡಲೇ ಒದಗಿಸುವುದು.

(4) ಪೌರ ಕಾರ್ಮಿಕರ ಸೊಸೈಟಿಗೆ ಷೇರು ಬಾಬ್ತು ವಸೂಲು ಮಾಡಿದ ಹಣಕ್ಕೆ ರಶೀಧಿ ಕೊಡಿಸಲು ಒಪ್ಪಂದವಾಯಿತು.

ಮಾತುಕತೆಯಲ್ಲಿ ಮೈಸೂರು ಸಿಟಿ ಕಾರ್ಪೊರೇಶನ್ ಎಂಪ್ಲಾಯಿಸ್ ಯೂನಿಯನ್ (CITU) ಪರವಾಗಿ ಸಂಘಟನೆಯ ಅಧ್ಯಕ್ಷರಾದ ಕಾಂ॥ ಎಂ.ಎನ್, ಉಗ್ರಪ್ಪ, ಪ್ರ. ಕಾರ್ಯದರ್ಶಿ, ಎಂ. ಸಿ. ಕೆ. ಮೋನ್, ಉಪಾಧ್ಯಕ್ಷರಾದ ಕಾಂ. ಚಿಕ್ಕಮಾರ ಮತ್ತು ಕಾಂ. ಕೆ. ತಿಮ್ಮೇಗೌಡ ಭಾಗವಹಿಸಿದ್ದರು.

ಚಾಮರಾಜನಗರ

ಎಸ್ ಎಫ್ ಐ ಘಟಕ ರಚನೆ

ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕು ಕೇಂದ್ರದಲ್ಲಿ ಇತ್ತೀಚೆಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಘಟಕವನ್ನು ರಚಿಸಲಾಯಿತು. ರಾಜ್ಯ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಸಭೆಯಲ್ಲಿ ಉಪಸ್ಥಿತರಿದ್ದು ಎಸ್.ಎಫ್.ಐ. ಧ್ಯೇಯ; ಧೋರಣೆಗಳನ್ನು ವಿವರಿಸಿದರು.

ಸಂಘಟನಾ ಸಮಿತಿಯನ್ನು ರಚಿಸಲಾಗಿದ್ದು ಅದರಲ್ಲಿ ಸಂಚಾಲಕರಾಗಿ ಚಿನ್ನಸ್ವಾಮಿ, ಸಹ ಸಂಚಾಲಕರಾಗಿ ಆರ್. ವೆಂಕಟೇಶ್ ಮತ್ತು ವಿಶಕಂಠಮೂರ್ತಿರವರುಗಳು ಆಯ್ಕೆಯಾಗಿದ್ದು ಸಂಘಟನಾ ಸಮಿತಿಯಲ್ಲಿ ವೆಂಕಟ್ರಾಮನಾಯಕ್, ನಾಗರಾಜು, ಸಿ, ಎನ್, ವೆಂಕಟೇಶ್, ಕೆ. ಆರ್. ಲಕ್ಷ್ಮಿನಾರಾಯಣ ಮತ್ತು ಜಿ. ಆರ್. ರಾಜು ಇವರುಗಳು ಇದ್ದಾರೆ.

ಸಂಘಟನೆಯನ್ನು ವಿಸ್ತರಿಸಲು ಮತ್ತು ಬಲ ಪಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ವಿದ್ಯಾರ್ಥಿನಿಯ ಸಂಶಯಾತ್ಮಕ ಸಾವಿನ ತನಿಖೆಗೆ ಒತ್ತಾಯಿಸಿ ಹೊಸಪೇಟೆಯಲ್ಲಿ ಎಸ್. ಎಫ್. ಐ. ಮೆರವಣಿಗೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿನಿಯಾಗಿದ್ದ ಕುಮಾರಿ ರೆಮೆನಾಳ್ ಎಂಬುವರು ನವಂಬರ್ 14 ರಂದು ನಿಗೂಢ ಸಾವಿಗೀಡಾಗಿದ್ದಾರೆ. ರೈಲ್ವೆ ನಿಲ್ದಾಣದ ಬಳಿಯಲ್ಲಿ ಪವರ್ ಕೆನಾಲ್‌ನಲ್ಲಿ ಆಕೆಯ ಶವವು ದೊರೆತಿದ್ದು ಪೊಲೀಸರು ಇದುವರೆಗೂ ಸಾವಿನ ಕಾರಣ ತಿಳಿಸಿಲ್ಲ. ವಿದ್ಯಾರ್ಥಿನಿಯ ಈ ಸಂಶಯಾತ್ಮಕ ಸಾವಿನ ಬಗ್ಗೆ ಕೂಡಲೇ ನ್ಯಾಯಾಂಗತನಿಖೆ ನಡೆಸುವಂತೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ನೇತೃತ್ವದಲ್ಲಿ ನವೆಂಬರ್ 21 ರಂದು ಹೊಸಪೇಟೆಯ ವಿದ್ಯಾರ್ಥಿಗಳು ತರಗತಿಯನ್ನು ಬಹಿಷ್ಕರಿಸಿ ಬೃಹತ್ ಮೆರವಣಿಗೆ ನಡೆಸಿದರು. ಸುಮಾರು 700 ಕ್ಕೂ ಹೆಚ್ಚು ಮಂದಿಯಿದ್ದ ಈ ಮೆರವಣಿಗೆಯಲ್ಲಿ 100 ಮಂದಿ ವಿದ್ಯಾರ್ಥಿನಿಯರೇ ಇದ್ದುದ್ದು ಗಮನಾರ್ಹವಾಗಿದೆ. ಎಸ್.ಎಫ್.ಐ. ಹೊಸಪೇಟೆ ನಗರ ಸಮಿತಿಯು ಡಿ.ವೈ.ಎಸ್.ಪಿ. ಯವರಿಗೆ ಸಲ್ಲಿಸಿರುವ ಮನವಿಯಲ್ಲಿ ಕುಮಾರಿ ರೆಮೆನಾಳ್‌ರವರ ಮೇಲೆ ಅತ್ಯಾಚಾರ ನಡೆದನಂತರ ಅಮಾನುಷವಾಗಿ ಕೊಲೆ ಮಾಡಿರಬಹುದಾಗಿ ಶಂಕೆ ವ್ಯಕ್ತ ಪಡಿಸಿದ್ದು ಈ ಪ್ರಕರಣದ ಬಗ್ಗೆ ಶೀಘ್ರ ತನಿಖೆಗೆ ಆಗ್ರಹ ಪಡಿಸಿದೆ. ಜಿಲ್ಲಾಧಿಕಾರಿಗಳಿಗೆ, ರಾಜ್ಯದ ಉನ್ನತ ಪೋಲೀಸ್ ಅಧಿಕಾರಿಗಳಿಗೆ, ಗೃಹ ಮಂತ್ರಿಗಳಿಗೆ ಮತ್ತು ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರಾದ ಕಾಮ್ರೇಡ್ ನೇಪಾಲ್ ದೇವ್ ಭಟ್ಟಾಚಾರ್ಯರವರಿಗೂ ಮನವಿ ಕಳುಹಿಸಲಾಗಿದೆ.

ಪ್ರಕರಣದ ಬಗ್ಗೆ ಸಕಾಲವಲ್ಲಿ ಪ್ರತಿಭಟನೆ ಸೂಚಿಸಿದ ಹೊಸಪೇಟೆಯ ಎಸ್. ಎಫ್. ಐ. ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳನ್ನು ರಾಜ್ಯ ಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಅಭಿನಂದಿಸಿದ್ದಾರೆ. ಹಾಗೂ ಪ್ರಕರಣದ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಅಣು ಯುದ್ಧದ ಅನಾಹುತ ಕುರಿತ ಚಿತ್ರ

ಅಣು ಸಮರದ ನಂತರ ಎಂತಹ ಭೀಕರ ಪರಿಸ್ಥಿತಿ ತಲೆದೋರುತ್ತದೆಂಬುದನ್ನು ದಿ ಡೇ ಆಫ್ಟರ್ (ಅಣು ಯುದ್ಧದ) ನಂತರ ದಿನ ಚಲನ ಚಿತ್ರ ಹೃದಯ ಕಲಕುವಂತೆ ಚಿತ್ರಿಸಿದೆ ಅಮೆರಿಕದಲ್ಲಿ ಪ್ರದರ್ಶನ ಗೊಳ್ಳುತ್ತಿರುವ ಈ ಟೆಲಿವಿಷನ್ ಚಿತ್ರ ಅಣು ಸಮರದ ಪರಿಣಾಮಗಳನ್ನು ಕುರಿತಂತೆ ಜನರ ಗಮನ ಸೆಳೆಯುತ್ತಿದೆ. ಚಿತ್ರ ಕೊನೆಯಲ್ಲಿ 'ದುರಂತಮಯ ಪರಿಣಾಮಗಳು' ಎಂಬ ಹೇಳಿಕೆ ನೀಡುತ್ತಾ ಅಣು ಯುದ್ಧ ನಡೆದಿದ್ದೇ ಆದಲ್ಲಿ ಚಲನ ಚಿತ್ರದಲ್ಲಿ ತೋರಿಸಿರುವುದಕ್ಕಿಂತಾ ವಾಸ್ತವ್ಯದಲ್ಲಿ ದುರಂತ ಸಾವಿರ ಪಟ್ಟು ಅಧಿಕವಾಗಿರುತ್ತದೆ ಎಂಬ ಸಂದೇಶ ನೀಡುತ್ತದೆ.

ಚಿತ್ರವನ್ನು ವೀಕ್ಷಿಸಿದ ಖ್ಯಾತ ಖಗೋಳ ಭೌತ ಶಾಸ್ತ್ರಜ್ಞ ಕಾರ್ಲ್ ಸಗನ್ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಹೇಳುವಂತೆ ಧಹನವಾಗುವ ನಗರಗಳಿಂದ ಏಳುವ ಹೊಗೆಯ ಮೋಡಗಳು ಸೂರ್ಯನ ಬೆಳಕನ್ನು ಸಂಪೂರ್ಣವಾಗಿ ಅಡ್ಡಗಟ್ಟುತ್ತಲ್ಲದೆ ಉಷ್ಣತೆಯ ಮಟ್ಟವನ್ನು ಹೆಪ್ಪುಗಟ್ಟುವ ಮಟ್ಟಕ್ಕೆ ಇಳಿಸುತ್ತದೆ. ಅಣು ಧಾಳಿಗೆ ಒಳಗಾದ ಪ್ರದೇಶಗಳಲ್ಲಿ ದಟ್ಟವಾದ ಕತ್ತಲೆ ಕವಿದು ನಾವು ನಮ್ಮ ಕೈಗಳನ್ನು ನೋಡಲು ಸಾಧ್ಯವಿಲ್ಲವೆಂದು ಸಂದರ್ಶವೊನಂದರಲ್ಲಿ ಹೇಳಿದ್ದಾರೆ.

ಈ ಚಲನಚಿತ್ರ ಈಗಾಗಲೇ ಅಮೆರಿಕನ್ ಜನತೆಯ ಹೃದಯ ಹಾಗೂ ಬುದ್ಧಿಯನ್ನು ಕಲಕಿದ್ದು ಯುದ್ಧಕೋರ ರೀಗನ್‌ಗೆ ತಲೆನೋವು ತಂದಿದೆ.! ಅಣು ಶಸ್ತ್ರಾಸ್ತ್ರಗಳ ವಿರೋಧಿ ಹಾಗೂ ಪರವಾದ ಗುಂಪುಗಳ ನಡುವೆ ಹೊಸ ಚರ್ಚೆಗೆ ಈ ಚಿತ್ರ ಅನುವುಮಾಡಿಕೊಟ್ಟು ಶಾಂತಿಪ್ರಿಯ ಚಳವಳಿಗೆ ಹೊಸ ಆಯಾಮವನ್ನು ನೀಡುವಲ್ಲಿ ಯಶಸ್ವಿಯಾಗಿದೆ.

ಡಿ ವೈ ಎಫ್ ಐ ಆಶ್ರಯದಲ್ಲಿ ರಾಜ್ಯೋತ್ಸವ

ಮೈಸೂರು ನಗರದ ಗಾಂಧಿನಗರದಲ್ಲಿ 13-11-83ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಆರ್. ಮೋಹನ್‌ಕುಮಾರ್ ವಹಿಸಿದ್ದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸೈಂಟ್‌ಫಿಲೋಮಿನ ಕಾಲೇಜಿನ ಇಂಗ್ಲೀಷ್ ಅಧ್ಯಾಪಕರಾದ ಕೆ. ಸಿ. ವಾಸುದೇವನ್‌ರವರು ಕರ್ನಾಟಕ ರಾಜ್ಯದ ಬಹುಪಾಲು ಜನತೆಯ ಜೀವನ ಸ್ಥಿತಿ ಗತಿ ಸುಧಾರಿಸಿದಂದು ಮಾತ್ರ ರಾಜ್ಯೋತ್ಸವ "ನಾಡಹಬ್ಬ" ವಾಗಲು ಸಾಧ್ಯವೆಂದರು, ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕೇಂದ್ರಿಯ ಭಾಷಾ ಸಂಸ್ಥಾನದ ಅಧ್ಯಾಪಕರಾದ ಲಿಂಗದೇವರು ಹಳೆ ಮನೆಯವರು ಕನ್ನಡ ಭಾಷೆಯ ಅಂದಾಭಿಮಾನದಿಂದ ಭಾಷೆಯ ಉದ್ಧಾರವಾಗಲಾರದೆಂದು ಹೇಳಿ ಭಾಷೆಯ ಹೆಸರಿನಲ್ಲಿ ಜನರನ್ನು ಒಡೆದ ಆಳುವ ನೀತಿಯನ್ನು ಖಂಡಿಸಿದರು. ಸಭೆಯಲ್ಲಿ ಮಾತನಾಡಿದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ರಾಜ್ಯ ಅಧ್ಯಕ್ಷರಾದ ಆರ್, ಜಯಕುಮಾರ್‌ರವರು ಇಂಗ್ಲೀಷ್ ಸಂಸ್ಕೃತಿಯ ಪ್ರಭಾವದಿಂದಾಗಿ ರಾಜ್ಯದಲ್ಲಿ ಕನ್ನಡ ಇನ್ನೂ ಆಡಳಿತ ಭಾಷೆಯಾಗಿಲ್ಲವೆಂದರು.

ಸಭೆಯಲ್ಲಿ ಜಿಲ್ಲಾ ಡಿ.ವೈ.ಎಫ್. ಐ. ಕಾರ್ಯದರ್ಶಿ ಜಿ, ಜಯರಾಂ, ಶಾಂತಪ್ಪ, ಮೈಸೂರು ನಗರ ಯುವ ಜನತಾ ಉಪಾಧ್ಯಕ್ಷರಾದ ರಾಮಕೃಷ್ಣರವರುಗಳು ಮಾತನಾಡಿದರು. ಮೊದಲಿಗೆ ಸಾಯಿಕುಮಾರ ಸ್ವಾಗತಿಸಿದರು. ಮಂಜುನಾಥಸ್ವಾಮಿಯವರು ವರದಿ ಓದಿದರು. ಜಾರ್ಜ್ ಧನ್ಯವಾದ ಸಲ್ಲಿಸಿದರು, ಕಾರ್ಯಕ್ರಮದ ಕೊನೆಯಲ್ಲಿ ಮೈಸೂರು ಸಮುದಾಯ ತಂಡದವರಿಂದ ಬೀದಿ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು

ಬಸ್ ದರ ಏರಿಕೆ ವಿರುದ್ಧ ಎಸ್‌ಎಫ್‌ಐ ಡಿವೈಎಫ್‌ಐ ಪ್ರದರ್ಶನ

ಇತ್ತೀಚೆಗೆ ಕರ್ನಾಟಕ ರಾಜ್ಯ ಸರಕಾರವು ರಸ್ತೆ ಸಾರಿಗೆ ಬಸ್ ದರಗಳನ್ನು ವಿಪರೀತವಾಗಿ ಏರಿಸಿರುವುದನ್ನು ಪ್ರತಿಭಟಿಸಿ 19-11-83 ರಂದು ಮೈಸೂರಿನ ಕೆ.ಎಸ್.ಆರ್. ಟಿ.ಸಿ. ಡಿಪೋ ಮುಂದೆ ಭಾರತ ವಿದ್ಯಾರ್ಥಿ ಫೇಡರೇಷನ್ (ಎಸ್, ಎಫ್. ಐ.) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್. ಐ.) ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಏರಿಸಲಾದ ದರಗಳನ್ನು ಕೂಡಲೇ ಇಳಿಸಲು, ವಿದ್ಯಾರ್ಥಿಗಳಿಗೆ ಮತ್ತು ಕೈಗಾರಿಕಾ ಕಾರ್ಮಿಕರಿಗೆ ಶೇಕಡ 50 ರಷ್ಟು ರಿಯಾಯಿತಿ ರಾಜ್ಯದಾದ್ಯಂತ ನೀಡಲು, ಖಾಸಗಿ ಬಸ್‌ಗಳನ್ನು ರಾಷ್ಟ್ರೀಕರಿಸಲು, ಗ್ರಾಮಾಂತರ ಪ್ರದೇಶಗಳಿಗೆ ಬಸ್ ಸೌಕರ್ಯ ಹೆಚ್ಚಿಸಲು ರಸ್ತೆ ಸಾರಿಗೆ ವಿಭಾಗದಲ್ಲಿ ಭ್ರಷ್ಟಾಚಾರ ಕೊನೆಗೊಳಿಸಲು ವಿಭಾಗ ಮ್ಯಾನೇಜರ್ ಮೂಲಕ ಸರಕಾರಕ್ಕೆ ನೀಡಿದ ಮನವಿಯಲ್ಲಿ ಒತ್ತಾಯಿಸಲಾಗಿದೆ, ಬೇಡಿಕೆ ಈಡೇರದಿದ್ದಲ್ಲಿ ತೀವ್ರ ಹೋರಾಟ ನಡೆಸಲಾಗುವದೆಂದು ಎಚ್ಚರಿಸಲಾಗಿದೆ.

ಎಸ್. ಎಫ್. ಐ. ನಾಲ್ಕನೇ ರಾಜ್ಯ ಸಮ್ಮೇಳನ

1984ರ ಜನವರಿ 22 ರಿಂದ 26 ರವರೆಗೆ ಪಶ್ಚಿಮ ಬಂಗಾಳದ 'ಡಂಡಂ' ನಲ್ಲಿ (ಕಲ್ಕತ್ತ) ನಡೆಯಲಿರುವ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನ ಐದನೇ ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಜನವರಿ 3 ರಿಂದ 5 ರವರೆಗೆ ಬೆಂಗಳೂರಿನಲ್ಲಿ ನಾಲ್ಕನೇ ರಾಜ್ಯ ಸಮ್ಮೇಳನವು ನಡೆಯುತ್ತದೆ. ಸುಮಾರು ಹತ್ತು ಲಕ್ಷ ಸದಸ್ಯರ ಪ್ರತಿನಿಧಿಗಳು ಅಖಿಲ ಭಾರತ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ರಾಜ್ಯ ಸಮ್ಮೇಳನದಲ್ಲಿ ಸುಮಾರು 25 ಸಾವಿರ ಸದಸ್ಯರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಬೆಂಗಳೂರು, ಮೈಸೂರು. ಕೋಲಾರ, ಧಾರವಾಡ, ಬೆಳಗಾಂ, ಬಿಜಾಪುರ, ಬಳ್ಳಾರಿ, ದಕ್ಷಿಣ ಕನ್ನಡ ಮತ್ತು ರಾಯಚೂರು ಜಿಲ್ಲಾ ಸಮ್ಮೇಳನಗಳನ್ನು ಡಿಸೆಂಬರ್ ತಿಂಗಳಿನಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಸಮ್ಮೇಳನದ ಅಂತಿಮ ದಿನವಾದ ಜನವರಿ 5 ರಂದು ದಶಲಕ್ಷ ಸಹಿ ಸಂಗ್ರಹದೊಂದಿಗೆ ಡೊನೇಷನ್–ಕ್ಯಾಪಿಟೇಷನ್ ಫೀ ಸಂಪೂರ್ಣ ರದ್ದತಿಗೆ ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಒತ್ತಾಯಿಸಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಲು ಬೃಹತ್ ವಿದ್ಯಾರ್ಥಿ ಮೆರವಣಿಗೆ ನಡೆಸಲಾಗುವುದು. ಜನವರಿ ೫ರ 'ವಿಧಾನ ಸೌಧ ಚಲೋ' ಕಾರ್ಯಕ್ರಮಕ್ಕೆ ಅಧಿಕ ಸಂಖ್ಯೆಯಲ್ಲಿ ಕರತರಲು ಬೆಂಗಳೂರು ಮತ್ತು ಸುತ್ತಲಿನ ಜಿಲ್ಲೆಗಳ ಶಾಖೆಗಳಿಗೆ ಎಸ್.ಎಫ್.ಐ. ರಾಜ್ಯ ಸಮಿತಿ ಕರೆ ನೀಡಿದೆ.

ಸಮ್ಮೇಳನದ ಸಂದರ್ಭದಲ್ಲಿ ಎಸ್. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯ ಮುಖವಾಣಿಯಾಗಿ ಕನ್ನಡ ಮಾಸಿಕ ಪತ್ರಿಕೆಯ ಮಾದರಿ ಹಂಚಿಕೆಯನ್ನು ಬಿಡುಗಡೆ ಮಾಡಲಾಗುವುದು. ಪತ್ರಿಕೆಯ ವಿಶೇಷ ನಿಧಿಗೆ ಹಿತೈಷಿಗಳು ಸಾಧ್ಯವಾದಷ್ಟು ಧನ ಸಹಾಯ ನೀಡಲು ವಿನಂತಿಸಲಾಗಿದೆ. ಹಣವನ್ನು ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿಯವರಿಗೆ 'ಐಕ್ಯರಂಗ' ವಿಳಾಸಕ್ಕೆ ಕಳುಹಿಸಬಹುದು. ರಾಜ್ಯ ಸಮ್ಮೇಳನದ ಅಂಗವಾಗಿ ಸ್ಮರಣ ಸಂಚಿಕೆಯೊಂದನ್ನು ಸಹ ಬಿಡುಗಡೆ ಮಾಡಲಿದ್ದು ಜಾಹಿರಾತುಗಳನ್ನು ಆಹ್ವಾನಿಸಲಾಗಿದೆ.

ರಾಜ್ಯ ಸಮ್ಮೇಳನದಲ್ಲಿ ಎಸ್. ಎಫ್. ಐ ನ ಕೇಂದ್ರ ಸಮಿತಿ ಮುಖಂಡರು, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಕೇರಳದ ರಾಜ್ಯ ಸಮಿತಿ ನಾಯಕರು ಹಾಗೂ ಜವಹರ ಲಾಲ್ ನೆಹರೂ ವಿ. ವಿ. ವಿದ್ಯಾರ್ಥಿ ಸಂಘದ ನೂತನ ಅಧ್ಯಕ್ಷೆ ರಶ್ಮಿ ದೊರೆಸ್ವಾಮಿಯವರು ಭಾಗವಹಿಸಲಿದ್ದಾರೆ.

ಸಮ್ಮೇಳನದ ಪೂರ್ವ ಸಿದ್ಧತೆಗಾಗಿ ನವೆಂಬರ್ 20 ರಂದು ಬೆಂಗಳೂರಿನಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಸ್ವಾಗತ ಸಮಿತಿಯಲ್ಲಿ ಎಸ್.ಎಫ್.ಐ. ಮತ್ತು ಸೌಹಾರ್ದ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ಎಲ್ಲ ಜನ ವಿಭಾಗಗಳಿಂದ ನೂರಕ್ಕೂ ಹೆಚ್ಚು ಸದಸ್ಯರಿದ್ದಾರೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಡಾ॥ ಬಿ. ಕೆ. ಚಂದ್ರಶೇಖರ್, ಕಾರ್ಯದರ್ಶಿಯಾಗಿ ಎನ್. ರಾಜಣ್ಣ ಮತ್ತು ಖಜಾಂಚಿಯಾಗಿ ಶಾಂತಕುಮಾರಿಯವರನ್ನು ಆಯ್ಕೆ ಮಾಡಲಾಗಿದೆ.

ಗದ್ದಿಗೆಯಲ್ಲಿ ರೈತ ಸಂಘದ ಸಭೆ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಗದ್ದಿಗೆಯಲ್ಲಿ 9–11–83 ರಂದು ಕರ್ನಾಟಕ ಪ್ರಾಂತ್ಯ ರೈತ ಸಂಘದ ಆಶ್ರಯದಲ್ಲಿ ಬೃಹತ್ ರೈತರ ಸಭೆ ಏರ್ಪಡಿಸಲಾಗಿತ್ತು. ಮೈಸೂರು ಜಿಲ್ಲೆಯಾದ್ಯಂತ ಕ್ರಿಯಾಶೀಲ ವಾಗುತ್ತಿರುವ ರೈತ ಸಂಘಟನೆಯು ವ್ಯಾಪಕವಾಗಿ ರೈತರ ಬೆಂಬಲವನ್ನು ಪಡೆಯಲಾರಂಭಿಸಿದೆ. ತೀರಾ ಕಡೆಗಣಿಸಲ್ಪಟ್ಟಿದ್ದ ಬಡ ರೈತರು ಅಸಂಖ್ಯಾತ ಮನವಿ ಪತ್ರಗಳೊಂದಿಗೆ ತಮ್ಮ ತುಂಬಾ ವರ್ಷಗಳ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ, ಕಡೆಗಣಿಸಲ್ಪಟ್ಟ ರೈತರು ಸಂಘಟನೆಯ ಹಾದಿಯಲ್ಲಿ ಮುನ್ನಡೆಯುತ್ತಿದ್ದು ಕರ್ನಾಟಕ ಪ್ರಾಂತ್ಯ ರೈತ ಸಂಘ ಇವರ ನೆರವಿಗೆ ಧಾವಿಸಿದೆ.

ಗದ್ದಿಗೆಯ ಸಭೆಯಲ್ಲಿ ರೈತ ಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್‌ರವರು ಮುಖ್ಯ ಭಾಷಣ ಮಾಡಿದರು. ಕಾಂಗ್ರೆಸ್ ಸರಕಾರ ರೈತರನ್ನು ಕಡೆಗಣಿಸಿರುವುದನ್ನು ದೀರ್ಘವಾಗಿ ವಿವರಿಸುತ್ತಾ ರೈತರು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆ ದೊರೆಯದಿರುವುದನ್ನು ತಿಳಿಯ ಪಡಿಸಿದರು. ಸರಕಾರಿ ಅಧಿಕಾರಿಗಳು ರೈತ ವಿರೋಧಿ ಧೋರಣೆ ತಳೆದಿರುವುದನ್ನು ಖಂಡಿಸಿದರು.

ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಪ್ರಾಂತ್ಯ ರೈತ ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್ ರವರು ಹಳ್ಳಿಗಳ ದುಃಸ್ಥಿತಿ, ನಿರುದ್ಯೋಗದ ಭೀಕರತೆ ಬಗ್ಗೆ ವಿವರಿಸಿ ರೈತರು ಸಂಘಟಿತರಾಗಲು ಕರೆನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಜನತಾ ಪಕ್ಷದ ಮುಖಂಡರಾದ ಶ್ರೀ ಕೆಂಗೇಗೌಡರು ಯಾರ ಬೆದರಿಕೆಗೂ ಬಗ್ಗದೆ ರೈತ ಸಂಘವನ್ನು ಬಲಪಡಿಸಲು ಕರೆ ನೀಡಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಬ್ಯಾಡರಹಳ್ಳಿಯ ಶ್ರೀ ಹನುಮೇಗೌಡರು ಸ್ಥೂಳೆಕೆರೆಯ ಕಾಲುವೆಯನ್ನು ದುರಸ್ಥಿಗೊಳಿಸಲು ಸರಕಾರವನ್ನು ಒತ್ತಾಯಪಡಿಸಿದರು. ಈ ಕಾಲುವೆ ದುರಸ್ಥಿಯಿಂದ 2 ಸಾವಿರ ಎಕರೆ ಭೂಮಿಗೆ ನೀರಾವರಿಯಾಗುವುದೆಂದು ಅವರು ತಿಳಿಸಿದರು.

ಮೈಸೂರು ಜಿಲ್ಲಾ ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಎನ್. ಉಗ್ರಪ್ಪನವರೂ ಸಭೆಯಲ್ಲಿ ಮಾತನಾಡಿದರು.

ಸಭೆ ನಡೆಯುತ್ತಿದ್ದಂತೆಯೇ ಸ್ಥಳೀಯ ತಹಶೀಲ್ದಾರರು ಸಭೆಗೆ ಪತ್ರ ಒಂದನ್ನು ಕಳುಹಿಸಿ ರೈತ ಸಂಘದ ಮುಖ್ಯ ಬೇಡಿಕೆಯೊಂದಾಗಿರುವ ಮಾರಸಹಳ್ಳಿಯ ಸರ್ವೆ ನಂಬರ್ 16 ರಲ್ಲಿ ಸುಮಾರು 60 ಕುಟುಂಬದವರು ವಾಸಕಾದ ಬೇಸಾಯ ಬೇಸಾಯ ನಡೆಸುತ್ತಿದ್ದು ಇವರುಗಳಿಗೆ ಭೂ ಹಕ್ಕು ವಿತರಣೆ ಮಾಡಲು ಸೂಕ್ತ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದು ಸಭೆಯ ವಿಶೇಷವಾಗಿತ್ತು., ಈ ಭೂಮಿಯು ಅಬ್ಕಾರಿ ಇಲಾಖೆಗೆ ಸೇರಿದ್ದು ಎನ್ನುವ ವಾದವನ್ನು ಈ ಹಿಂದೆ ಸರಕಾರ ಮುಂದಿರಿಸಿತ್ತು. ಆದರೆ ಕಳೆದ 20 ವರ್ಷಗಳಿಂದ ಬೇಸಾಯ ನಡೆಸುತ್ತಿರುವ ರೈತರು ಪ್ರಾಂತ್ಯ ರೈತ ಸಂಘದಲ್ಲಿ ಸಂಘಟಿತರಾಗಿ ಹೋರಾಡಲು ನಿರ್ಧರಿಸಿದ್ದರ ಫಲವಾಗಿ ಅವರ ಬಹು ವರ್ಷಗಳ ಕನಸು ನನಸಾಗುವ ಹಾದಿಯಲ್ಲಿ ಮುನ್ನಡೆದಿದೆ.

ಗದ್ದಿಗೆಯಲ್ಲಿ ಬೃಹತ್ ರೈತ ಸಭೆ ವ್ಯವಸ್ಥೆಗೊಳಿಸಲು ಎಲ್ಲಾ ರೀತಿಯಿಂದ ನೆರವಾದ ಶ್ರೀಯುತರುಗಳಾದ ಮೈನರ್ ಕುಪ್ಪಸ್ವಾಮಿ, ಎಚ್. ಪಿ. ಚಿನ್ನಸ್ವಾಮಿ, ಎಸ್. ಕೆ. ನಟರಾಜ್, ಮಾರಿಮುತ್ತು, ಪಿ. ಮುತ್ತುರಾಜ ಅರಸ್, ಹರಂದಾಮನ್, ರಾಮಸ್ವಾಮಿಯವರುಗಳಿಗೆ ರೈತ ಸಂಘ ಕೃತಜ್ಞತೆ ಸಲ್ಲಿಸಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office L-56, K. V.Temple Street, Sultanpet, B-53. Phone : 24154
Editor ; P. Ramachandra Rao.